

# ಸಿಹಿ ಕಹಿ


ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 | Issue : 313 | Thursday 28-08-2025 | E-mail : maruti.b.hosamani76@gmail.com | Page: 4 | Price : Rs. 1/-


## ದಾಂಪತ್ಯ ಕಲಹಕ್ಕೆ ಕೊನೆಯಿಲ್ಲದ ದುರಂತ ಪತ್ನಿಯ–ದೇಹ ತುಂಡರಿಸಿ ಬಾವಿಗೆ ಎಸೆದ ಪತಿ







**ಸಿಹಿ ಕಹಿ ಸುದ್ದಿ,**

**ಸಿಂದಗಿ :** ತಾಲ್ಲೂಕಿನ ಗಣಿಹಾರ ಗ್ರಾಮದಲ್ಲಿ ನಡೆದ ಭೀಕರ ಕೊಲೆ ಪ್ರಕರಣವೊಂದು ಬೆಳಕಿಗೆ ಬಂದಿದೆ. ಪತಿ ಪರಮಾನಂದ ಎಂಬಾತ ತನ್ನ ಪತ್ನಿ ನೀಲಮ್ಮ (46) ಳನ್ನು ಮಾರಕಾಸ್ತ್ರದಿಂದ ಕೊಲೆ ಮಾಡಿ, ದೇಹವನ್ನು ತುಂಡರಿಸಿ ಬಾವಿಗೆ ಎಸೆದಿದ್ದಾನೆ ಎಂದು ಆರೋಪಿಸಲಾಗಿದೆ.

ಪ್ರಕರಣದ ವಿವರ ಮಂಗಳವಾರ ತಡರಾತ್ರಿ ಈ ಘಟನೆ ಸಂಭವಿಸಿದೆ.

ಮಂಗಳವಾರ ರಾತ್ರಿ ನೀಲಮ್ಮ ಅವರು ತಮ್ಮ ಜಮೀನಿನಲ್ಲಿ ಬೆಳೆದ ಮೆಕ್ಕೆ ಜೋಳದ ಬೆಳೆಯನ್ನುಹಂದಿಗಳಹಾವಳಿಯಿಂದರಕ್ಷಿಸಲು ಪಟಾಕಿ ಸಿಡಿಸಲು ಹೊಲಕ್ಕೆ ಹೋಗಿದ್ದರು. ಅದೇ ಸಮಯದಲ್ಲಿ, ಪತಿ ಪರಮಾನಂದ ಅವರು ನೀಲಮ್ಮಳನ್ನು ಹಿಂಬಾಲಿಸಿ ಕೊಂಡು ಹೋಗಿ ಹರಿತವಾದ ಆಯುಧದಿಂದ ಆಕೆಯ ದೇಹವನ್ನು ಕತ್ತರಿಸಿ, ನಂತರ ಶವವನ್ನು ಬಾವಿಗೆ ಎಸೆದಿದ್ದಾನೆ ಎಂದು ಶಂಕೆ ವ್ಯಕ್ತವಾಗಿದೆ.

ಬುಧವಾರಬೆಳಿಗ್ಗೆ,ಮಗಷಣ್ಮುಖತಾಯಿಯನ್ನು ಹುಡುಕಿ ಕೊಂಡು ಹೊಲದ ಬಳಿ ಹೋದಾಗ, ಬಾವಿಯ ಸಮೀಪ ರಕ್ತದ ಗುರುತುಗಳನ್ನು ಕಂಡು ತಕ್ಷಣ ಸಿಂದಗಿ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ ಎಂದು ತಿಳಿದ ಪೊಲೀಸರು ಸ್ಥಳಕ್ಕೆ ಧಾವಿಸಿದಾಗ ಈ ಘೋರ ಕೃತ್ಯ ಬೆಳಕಿಗೆ ಬಂದಿದೆ.

ದಾಂಪತ್ಯ ಕಲಹವೇ ಕೊಲೆಗೆ ಕಾರಣ? ಸಿಂದಗಿ ಪೊಲೀಸ್ ಠಾಣೆಯ ಪ್ರಾಥಮಿಕ ಮಾಹಿತಿ ಪ್ರಕಾರ, ಆರೋಪಿ ಪರಮಾನಂದ ಮತ್ತು ನೀಲಮ್ಮ ಅವರ ನಡುವೆ ದಾಂಪತ್ಯದಲ್ಲಿ ಸಣ್ಣ ಪುಟ್ಟ ಜಗಳಗಳು ನಡೆಯುತ್ತಿದ್ದವು. ಸೋಮವಾರ ರಾತ್ರಿ ಸಹ ಇವರಿಬ್ಬರ ನಡುವೆ ದೊಡ್ಡ ಜಗಳ ನಡೆದಿದ್ದು, ಆ ವೇಳೆ ಪರಮಾನಂದ 'ನಿನ್ನನ್ನು ಕತ್ತರಿಸಿ ಕೊಲೆ ಮಾಡಿ ಮುಗಿಸುತ್ತೇನೆ' ಎಂದು ನೀಲಮ್ಮಳಿಗೆ ಬೆದರಿಕೆ ಹಾಕಿದ್ದನು ಎಂದು ಮಗ ಷಣ್ಮುಖ ಸ್ಪಷ್ಟಪಡಿಸಿದ ಎಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾನೆ.

ಬಾವಿಯಿಂದ ಮೃತ ನೀಲಮ್ಮಳ ದೇಹದ ಅರ್ಧ ಭಾಗ ಮಾತ್ರ ದೊರೆತಿದ್ದು, ಇನ್ನೂಳಿದ ಅರ್ಧ ಭಾಗಕ್ಕಾಗಿ ಪೊಲೀಸರು ಹುಡುಕಾಟ ಮುಂದುವರಿಸಿದ್ದಾರೆ.

ಪ್ರಕರಣವು ಸಿಂದಗಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು,ನಾಪತ್ತೆಯಾಗಿರುವ ಆರೋಪಿ ಪರಮಾನಂದನ ಪತ್ತೆಗಾಗಿ ಶೋಧಕಾರ್ಯ ಮುಂದುವರಿದಿದೆ ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಚಿದಾನಂದ.ಬಿ.ಉಪ್ಪಾರ.ಸಿಂದಗಿ**

## ಜೆಸಿಬಿ ಮೂಲಕ ಪುಷ್ಪಾರ್ಚನೆ ಮಾಡಿ – ಗಣೇಶನ ಅದ್ದೂರಿ ಸ್ವಾಗತಿಸಿದರು





**ಸಿಹಿ ಕಹಿ ಸುದ್ದಿ,**

**ಗೊರಬಾಳ :** ಇಳಕಲ್ಲ ತಾಲೂಕಿನ ಸಮೀಪದ ಗೊರಬಾಳ ಸಿದ್ಧಿ ವಿನಾಯಕ ಗೆಳೆಯರ ಬಳಗದ ಯುವಕರು ಮಾಡಿದ್ದ ನಮ್ಮ ಓಣೆ–ಯ ಗಣಪತಿ ಚಂದ ಡಿ.ಜೆ ಹಚ್ಚಿ ಮೆರಿಸೋಣ ಮುಂದ. ಎಲ್ಲಾರು ಒಂದೇ ಕಲರ್ ಅಂಗಿ ತಂದ ಎಂಬ ಸಾಂಗ್ ಮೂಲಕ ರಾಜ್ಯದಾದ್ಯಂತ ವೈರಲ್ ಆಗಿದ್ದ ಗೊರಬಾಳದ ಸಿದ್ಧಿ ವಿನಾಯಕ ಗೆಳೆಯರ ಬಳಗದ ಯುವಕರು ಜೆಸಿಬಿ ಮೂಲಕ ಪುಷ್ಪಾರ್ಚನೆ ಮಾಡಿ ಗಣೇಶನನ್ನು ಅದ್ದೂರಿ ಸ್ವಾಗತಿಸಿದರು. ನಂತರ ಅದೇ ಜೆಸಿಬಿ ಮೂಲಕ ವಿವೇಕಾನಂದ ತರುಣ ಸಂಘದ ಯುವಕರು ಪುಷ್ಪಾರ್ಚನೆ ಮಾಡಿ ಗಣೇಶನನ್ನು ಗ್ರಾಮಕ್ಕೆ ಬರಮಾಡಿ ಕೊಂಡರು.

ಗೊರಬಾಳ ಗ್ರಾಮದಲ್ಲಿ ಬೆಳಗ್ಗೆ ಯಿಂದ ಮಧ್ಯಾಹ್ನದ ವರೆಗೆ ಯುವಕರು ತಂಡೋಪತಂಡವಾಗಿ ಇಲಕಲ್ಲ ಹಾಗೂ ಮತ್ತು ಸಾಧುರ ತೋಟದಿಂದ ಕಳಸಾ ಡೊಳ್ಳುಮಜಲು ಟ್ಯಾಕ್ಟರ್ ಸಾಂಗ್ ಗಳೊಂದಿಗೆ ಅದ್ದೂರಿಯಾಗಿ ಡ್ಯಾನ್ಸ್ ಮಾಡುತ್ತಾ ಗಣೇಶನನ್ನು ವಿವಿಧ ಮೆರವಣಿಗೆಗಳ ಮೂಲಕ ಗೊರಬಾಳದ ವರೆಗೆ ಬರಮಾಡಿ ಕೊಂಡು ಗಣೇಶನು ಊರನ್ನು ಪ್ರವೇಶಿಸುತ್ತಿದ್ದಂತೆಯೇ ಜೆ.ಸಿ.ಬಿ ಮೂಲಕ ಪುಷ್ಪಾರ್ಚನೆ ಮಾಡಿ

ವಿಭಿನ್ನ ಶೈಲಿಯಲ್ಲಿ ಗಣೇಶನನ್ನು ಬರಮಾಡಿ ಕೊಂಡಿದ್ದ ಯುವಕರ ಖುಷಿ ಮುಗಿಲು ಮುಟ್ಟಿತ್ತು ನಂತರ ಗಣೇಶನನ್ನು ಪ್ರತಿಷ್ಠಾಪಿಸಿ ಪೂಜಾ ಕೈಕಾಂರ್ಯ ಗಳಲ್ಲಿ ಪಾಲ್ಗೊಂಡು ಗಣೇಶನನ್ನು ಅದ್ದೂರಿಯಾಗಿ ಮೆರವಣಿಗೆ ಯೊಂದಿಗೆ ಗ್ರಾಮಕ್ಕೆ ಬರಮಾಡಿ ಕೊಂಡಿದ್ದು ಗ್ರಾಮದ ಜನ ನೋಡಿದ ಖುಷಿ ಕಣ್ತುಂಬಿ ಕೊಂಡರು.

ಸಿದ್ಧಿ ವಿನಾಯಕ ಗೆಳೆಯರ ಬಳಗದ ಅಧ್ಯಕ್ಷ ಮಹಾಂತೇಶ ಪೂಜಾರಿ ಮಾತನಾಡಿ ಗೊರಬಾಳದಲ್ಲಿ ಪ್ರತಿ ವರ್ಷ ವಿವಿಧ ಯುವಕರ ಗುಂಪುಗಳು ವಿನಾಯಕನ ಪ್ರತಿಷ್ಠಾಪನೆಯನ್ನು ಅದ್ದೂರಿಯಾಗಿ ಮಾಡುತ್ತಾ ಬಂದಿದ್ದು ಈ ವರ್ಷವೂ ಅದ್ದೂರಿಯಾಗಿ ಮಾಡುವುದರ ಜೊತೆಗೆ ಜೆ.ಸಿ.ಬಿ ಮೂಲಕ ಪುಷ್ಪಾರ್ಚನೆ ಮಾಡಿ ಗಣೇಶನನ್ನು ಸ್ವಾಗತಿಸಿದ್ದು ಗ್ರಾಮದ ಎಲ್ಲರಿಗೆ ಖುಷಿ ತಂದಿದೆ ಹಾಗೂ ಸತತ ಐದು ದಿನಗಳ ಕಾಲ ಗೊರಬಾಳ ಗ್ರಾಮದಲ್ಲಿ ವಿವಿಧ ಕಡೆ ಗಣೇಶನ ಪ್ರಸಾದ ವ್ಯವಸ್ಥೆ ಇದ್ದು ಗಣೇಶನ ಎಲ್ಲಾ ಭಕ್ತರು ಪ್ರಸಾದವನ್ನು ಸ್ವೀಕರಿಸಿ ಕೊಂಡು ಹೋಗಬೇಕು ಎಂದು ತಿಳಿಸಿದರು.

## ಪವಿತ್ರ ಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿಗಳ ವಿರುದ್ಧದ ಅಪಪ್ರಚಾರ ಖಂಡನೀಯ

### ರಾಜ್ಯದಲ್ಲಿ ಅಸಮರ್ಥ ಸರ್ಕಾರ | ಧರ್ಮಸ್ಥಳ ವಿಶ್ವಕ್ಕೇ ಮಾದರಿ | ಧರ್ಮಸ್ಥಳದ ಅನ್ನದ ಋಣ ನಮ್ಮೆಲ್ಲರ ಮೇಲಿದೆ





**ರಬಕವಿ–ಬನಹಟ್ಟಿ :** ಧರ್ಮಸ್ಥಳ ನಾಡಿನ ಎಲ್ಲ ಜಾತಿ ಧರ್ಮದವರ ಒಂದು ಪವಿತ್ರವಾದ ಕ್ಷೇತ್ರವಾಗಿದ್ದು, ಧರ್ಮಾಧಿಕಾ–ರಿಯಾಗಿರುವ ವೀರೇಂದ್ರ ಹೆಗ್ಗಡೆಯವರು ದೇವಮಾನವರು. ಇಂಥ ಪವಿತ್ರ ಕ್ಷೇತ್ರ ಮತ್ತು ಧರ್ಮಾಧಿಕಾರಿಗಳ ವಿರುದ್ಧ ನಡೆಸುತ್ತಿರುವ ಅಪಪ್ರಚಾರ ಖಂಡನೀಯವಾಗಿದೆ ಎಂದು ಹಳಿಂಗಳಿ ಭದ್ರಗಿರಿ ಬೆಟ್ಟ ಪ್ರದೇಶದ ಜೈನಮುನಿ ಕುಲರತ್ನ ಭೂಷಣ ಮಹಾರಾಜರು ತಿಳಿಸಿದರು.

ಅವರು ಗುರುವಾರ ಸ್ಥಳೀಯ ಪೊಲೀಸ್ ಠಾಣೆಯ ಮುಂಭಾಗದಲ್ಲಿ ರಬಕವಿ ಬನಹಟ್ಟಿ ಹಾಗೂ ತೇರದಾಳ ತಾಲ್ಲೂಕಿನ ಎಲ್ಲ ಜಾತಿ ಧರ್ಮದವರು ಹಮ್ಮಿಕೊಂಡ ಬೃಹತ್ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು.

ಸರ್ಕಾರ ಮೊದಲು ಅನಾಮಿಕ ವ್ಯಕ್ತಿಯನ್ನು ಬೆಳಕಿಗೆ ತೆಗೆದುಕೊಂಡು ಬರಬೇಕು. ರಾಜ್ಯದಲ್ಲಿ ಅಸಮರ್ಥ ಸರ್ಕಾರ ಅಡಳಿತ ನಡೆಸುತ್ತಿದೆ.

ನಾವೆಲ್ಲರೂ ಒಗ್ಗಟ್ಟಾಗಿ ಜಾಗೃತರಾದರೆ ಮಾತ್ರ ಸರ್ಕಾರ ಎಚ್ಚೆತ್ತುಕೊಳ್ಳುತ್ತದೆ. ಅನಾಮಿಕನೊಬ್ಬ ವಿಧಾನ ಸಭೆಯ ಆವರಣದಲ್ಲಿ ತಾನು ಶವಗಳನ್ನು ಹೂಳಿದ್ದೇನೆ ಎಂದು ಹೇಳಿದರೆ ವಿಧಾನಸೌಧವನ್ನು ಅಗೆಯಲು ಸಾಧ್ಯವೇ ಎಂದು ಕುಲರತ್ನ ಭೂಷಣ ಮಹಾರಾಜರು ಪ್ರಶ್ನಿಸಿದರು.

ಶಾಸಕ ಸಿದ್ದು ಸವದಿ ಮಾತನಾಡಿ, ಧರ್ಮಸ್ಥಳದ ಕುರಿತು ಅಪಪ್ರಚಾರ ಮಾಡುತ್ತಿರುವುದು ಅತ್ಯಂತ ನಿಂದನೀಯವಾಗಿದೆ. ಈ ಸರ್ಕಾರ ಎಲ್ಲಕ್ಕಿಂತ ಮೊದಲು ಅನಾಮಿಕ ಮುಸುಕುಧಾರಿಯನ್ನು ಬಂಧಿಸಿ, ಆತನನ್ನು ಮಂಪರು ಪರೀಕ್ಷೆಗೆ ಒಳಪಡಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕಿತ್ತು.

ಆದರೆ ಹಾಗೆ ಮಾಡದೇ ಪವಿತ್ರ ಕ್ಷೇತ್ರ ಧರ್ಮಸ್ಥಳವನ್ನು ಹಾಳು ಮಾಡಲು ಹೊರಟಿರುವ ಸರ್ಕಾರದ ಕ್ರಮ ಖಂಡನೀಯವಾಗಿದೆ. ಹಿಂದೂ ಹಾಗೂ ಜೈನ ಸಮುದಾಯದವರನ್ನು ಅವಮಾನಿಸುವ ನೀಚನ ಅನಾಮಿಕ ಹೇಳಿಕೆ ಪ್ರಕಾರ ಆಸೆ ಆಮಿಷವೊಡ್ಡಿ ಇಂತಹ ಕೃತ್ಯಕ್ಕೆ ಬೆಂಬಲಿಸುವ ಮತ್ತು ಎಸ್ಐಟಿ ನೇಮಿಸಿದವರು ಸಾರ್ವಜನಿಕರಲ್ಲಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ರಬಕವಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿಗಳು ಮಾತನಾಡಿ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದವರ ಮತ್ತು ಅದೇ ರೀತಿಯಾಗಿ ಅಂಗವಿಕಲರ, ಅನಾಥರ ಬದುಕಿಗೆ ಮತ್ತು ಮಠ ಮಂದಿರಗಳಿಗೆ ಶಕ್ತಿ ತುಂಬುವ ಕೆಲಸ ಧರ್ಮಸ್ಥಳದ ಧರ್ಮಾಧಿಕಾರಿಗಳು ಮಾಡುತ್ತಿದ್ದಾರೆ. ಧರ್ಮಸ್ಥಳದ ಕಾರ್ಯ ವಿಶ್ವಕ್ಕೆ ಮಾದರಿಯಾಗಿದೆ ಎಂದರು.

ನಂತರ ತಹಸೀಲ್ದಾರ ಗಿರೀಶ ಸ್ವಾದಿಯವ–ರಿಗೆ ಮನವಿ ಸಲ್ಲಿಸಲಾಯಿತು. ಬೆಳಿಗ್ಗೆ ಹನ್ನೊಂದಕ್ಕೆ ರಬಕವಿ ಹೊಸ ಬಸ್ ನಿಲ್ದಾಣದಿಂದ ಹೊರಟ ಬೃಹತ್ ಪ್ರತಿಭಟನಾ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕೊನೆಗೆ ಬನಹಟ್ಟಿ ಪೊಲೀಸ್ ಠಾಣೆಯ ಎದುರು ಜಮಖಂಡಿ ಕುಡಚಿ ರಾಜ್ಯ ಹೆದ್ದಾರಿ ಬಂದ್ ಮಾಡಿ ಬೃಹತ್ ಸಭೆ ನಡೆಯಿತು.

ಒಂದು ಗಂಟೆಗೂ ಹೆಚ್ಚಿನ ಕಾಲ ರಸ್ತೆ ತಡೆ ಮಾಡಲಾಯಿತು.

ಜುಂಝುರವಾಡದ ಬಸವರಾಜೇಂದ್ರಶರಣ–ರು ಮಾತನಾಡಿದರು. ದರ್ಶನಭೂಷಣ ಮಹಾರಾಜರು, ಜ್ಞಾನಭೂಷಣಮತಿ ಸೇರಿದಂತೆ ಬೃಹತ್ ಪ್ರತಿಭಟನೆಯಲ್ಲಿ ಧರೆಪ್ಪ ಉಳ್ಳಾಗಡ್ಡಿ, ಡಾ. ಮಹಾವೀರ ದಾನಿಗೊಂಡ, ಸತೀಶ ಹಜಾರೆ, ಅಶೋಕ ಆಳಗೊಂಡ, ರಾಮಣ್ಣ ಹುಲಕುಂದ, ಸುರೇಶ ಅಕ್ಕಿವಾಟ, ಶ್ರೀಶೈಲ ಬೀಳಗಿ, ಸಂ–ಜಯ ತೆಗ್ಗಿ, ಈರಣ್ಣ ಚಿಂಚಖಂಡಿ, ಪ್ರಭು ಪೂಜಾರಿ, ಸಂಜು ತೇಲಿ, ಆನಂದ ಜುಗಳಿ, ರವಿ ಗಡಾದ, ಪುಷ್ಪದಂತ ದಾನಿಗೊಂಡ, ಸವಿತಾ ಹೊಸೂರ, ಗಂಗಪ್ಪ ಅಮ್ಮಲಜೇರಿ, ವೈಷ್ಣವಿ ಬಾಗೇವಾಡಿ, ಮಹಾದೇವ ದುಪದಾಳ, ಮಹಾದೇವ ಕೋಟ್ಯಾಳ, ಸಿದ್ಧನಗೌಡ ಪಾಟೀಲ, ಡಾ. ವಿನೋದ ಮೇತ್ರಿ, ಡಾ. ಅಭಿನಂದನ ಡೋರ್ಲೆ, ಗೌರಿ ಮಿಳ್ಳಿ, ಅಶೋಕ ಅಳಗೊಂಡ, ಬಾಬಾಗೌಡ ಪಾಟೀಲ, ಮಹಾವೀರ ಕೊಕಟನೂರ, ಕುಮಾರ ಯಲ್ಲಟ್ಟಿ, ಶ್ರೀಶೈಲ ಗಸ್ತಿ, ಹೊನ್ನಪ್ಪ ಬಿರಡಿ, ಶಿವಾನಂದ ಗಾಯಕವಾಡ ಸೇ–ರಿದಂತೆ ರಬಕವಿ ಬನಹಟ್ಟಿ ಮತ್ತು ತೇರದಾಳ ತಾಲ್ಲೂಕಿನ ವಿವಿಧ ನಗರ ಮತ್ತು ಗ್ರಾಮೀಣ ಪ್ರದೇಶದ ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಸಮಾಜದಲ್ಲಿ ಸಹಕಾರಿ ಕ್ಷೇತ್ರಕ್ಕೆ ಮಹತ್ವದ ಪಾತ್ರವಿದೆ



**ರಬಕವಿ–ಬನಹಟ್ಟಿ :** ರೈತ, ಕೂಲಿ ಕಾರ್ಮಿಕ ಸೇ–ರಿದಂತೆ ಸಮಾಜಕ್ಕೆ ಸಹಕಾರಿ ರಂಗದ ಕೊಡುಗೆ ಅಪಾರವಾಗಿದೆ. ಅದರಂತೆ ಜಗದಾಳ ಗ್ರಾಮದಲ್ಲಿ ಪ್ರತಿಯೊಬ್ಬ ಗ್ರಾಮಸ್ಥನೂ ಪ್ರಯೋಜನ ಪಡೆದಿರುವದು ವಿಶೇಷವೆಂದು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ ಸರನಾಯಕ ಹೇಳಿದರು.

ಗುರುವಾರ ಜಗದಾಳ ಗ್ರಾಮದ ಪಿಕೆಪಿಎಸ್ನ 'ಅಮೃತ ಮಹೋತ್ಸವ'ದಲ್ಲಿ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು,ಏಷ್ಯಾದಲ್ಲಿಯೇ ಸಹಕಾರಿ ಕ್ಷೇತ್ರ ಪರಿಚಯಿಸಿದ ಹೆಮ್ಮೆ ಗದುಗಿನಾಳದ ಸಿದ್ಧನಗೌಡ ಪಾಟೀಲರಿಗೆ ಸಲ್ಲುತ್ತದೆ.

ಅದರಂತೆ ರಾಜ್ಯದಲ್ಲಿಯೇ ಅತಿ ಹೆಚ್ಚು ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಾಲ ವಿತರಿಸಿದ ಹೆಮ್ಮೆ ಬಿಡಿಸಿಸಿ ಬ್ಯಾಂಕಿನದ್ದು ಎಂದರು. ಸಂಪನ್ಮೂಲ ಹೆಚ್ಚಾದಂತೆ ಸರ್ಕಾರದ ನಿಯಮದಡಿ ಪ್ರತಿ ರೈತನಿಗೂ ಐದು ಲಕ್ಷ ರೂ. ಶೂನ್ಯ ಬಡ್ಡಿಯಲ್ಲಿ ಸಾಲ ಒದಗಿಸುವ ಬಯಕೆ ನಮ್ಮದಾಗಿದೆಯೆಂದರು.

ಗೋದಾಮು ಉದ್ಘಾಟಿಸಿದ ಶಾಸಕ ಸಿದ್ದು ಸವದಿ ಮಾತನಾಡಿ, ವೀಳ್ಯದೆಲೆ, ದ್ರಾಕ್ಷಿ, ಅರಿಷಿಣ ಹಾಗು ಕಬ್ಬು ಸೇರಿದಂತೆ ಸಮಗ್ರ ಕೃಷಿಯಿಂದ ಜಗದಾಳ ಗ್ರಾಮವು ಸಿರಿವಂತಿಕೆಯನ್ನು ಹೊಂದಿದೆ. ಎಲ್ಲ ರೈತರೂ ಮಾದರಿಯಾಗಿ ಅಭಿವೃದ್ಧಿ ಹೊಂದುತ್ತಿರುವುದು ವಿಶೇಷವಾಗಿದ್ದು, ಇದೇ ಕಾರಣದಿಂದ ಪಿಕೆಪಿಎಸ್ ಮೂರು ಲಕ್ಷ ರೂ. ವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ವಿತರಿಸುತ್ತಿರುವದೇ ಇದಕ್ಕೆ ಸಾಕ್ಷಿಯೆಂದರು.

ಸಂಘದ ಅಧ್ಯಕ್ಷ ಸುಭಾಸ ಉಳ್ಳಾಗಡ್ಡಿ ಮಾತನಾಡಿ, 75 ವರ್ಷಗಳಿಂದ ಸಾಕಷ್ಟು ಸದಸ್ಯರು ಈ ಸಂಘದ ಅಭಿವೃದ್ಧಿಗೆ ಶ್ರಮಿಸಿದ್ದು, ಇದೀಗ ಅದು ಹೆಮ್ಮರವಾಗಿ ಬೆಳೆದಿರುವದು ಸಂತಸ ತಂದಿದೆ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಹಿರೇಮಠದ ಶರಣಬಸವ ಶಿವಾಚಾರ್ಯರು, ಬಬಲಾದಿಯ ಬಸಯ್ಯ ಸ್ವಾಮೀಜಿ ವಹಿಸಿದ್ದರು. ಅತಿಥಿಗಳಾಗಿ ಸಿದ್ಧನಗೌಡ ನೀಲಪ್ಪನವರ, ದಾನಯ್ಯ ಹಿರೇಮಠ, ವಿ. ಮಹೇಶ್ವರಪ್ಪ, ಮಂಜುನಾಥ ರೆಡ್ಡಿ ಎಸ್. ರಾಮನಗೌಡ ಪಾಟೀಲ, ಎಂ. ಎಂ. ಮರನೂರ, ಭರತೇಶ ಹರವಿ, ಬಾಬಾಗೌಡ ಪಾಟೀಲ, ಪುಂಡಲೀಕ ಪಾಲಭಾಂವಿ, ಅನ್ನಪೂರ್ಣ ಹೇಮವಾಡಗಿ, ಶಿವಾಜಿ ಸೋರಗಾಂವಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ಮಲ್ಲಪ್ಪ ಹಳ್ಳೂರ, ಶಿವಪ್ಪ ಚಿಂಚಲಿ, ಗಂಗಪ್ಪ ಉಳ್ಳಾಗಡ್ಡಿ, ಅಡಿವೆಪ್ಪ ಬಿರಾದಾರ ಪಾಟೀಲ, ಶೇಖರ ನೀಲಕಂಠ, ಭೀಮಪ್ಪ ಬಿರಾದಾರ ಪಾಟೀಲ, ನಾಮದೇವ ಉಪ್ಪಾರ, ಬಾಳಪ್ಪ ದಡ್ಡಿಮನಿಯವರನ್ನು ಸನ್ಮಾನಿಸಲಾಯಿತು.

### ಸುದ್ದಿಮನೆ ಚೇತನ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ

## ಸುದ್ದಿಮನೆಯ ಪತ್ರಕರ್ತರಿಗೆ ಸಮಗ್ರ ಜ್ಞಾನ ಮತ್ತು ಜವಾಬ್ದಾರಿ ಅಗತ್ಯ: ಈಶ್ವರ ಹನಗಂಡಿ

**ಮಹಾಲಿಂಗಪುರ :** ಪತ್ರಿಕೆಗಳ ಸುದ್ದಿಮನೆಯಲ್ಲಿ ಕಾರ್ಯನಿರ್ವಹಿಸುವ ಪತ್ರಕರ್ತರಿಗೆ ಒತ್ತಡದ ಜೊತೆಗೆ ಜವಾಬ್ದಾರಿಯು ಬಹಳ ಇರುತ್ತದೆ ಎಂದು ಜಮಖಂಡಿ ತಾಲ್ಲೂಕಿನ ಹುನ್ನೂ–ರಿನ ಹಿರಿಯ ಪತ್ರಕರ್ತ ಈಶ್ವರ ಶಾಂತವೀರಪ್ಪ ಹನಗಂಡಿ ಹೇಳಿದರು.

ಮಂಗಳವಾರ ಸ್ಥಳೀಯ ಕಾನಿಪ ಸಂಘ ಮತ್ತು ಮಧುರಾ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಜರುಗಿದ ಲಿಂಗೈಕ್ಯ ಶಾಂತವೀರಯ್ಯ ಮನ್ನಯ್ಯನವರಮಠ ಸ್ಮರಣಾರ್ಥ–ರ್ಥ ಸುದ್ದಿಮನೆಯಲ್ಲಿ ಕಾರ್ಯನಿರ್ವಹಿಸುವ ಪತ್ರಕರ್ತರನ್ನು ಗುರುತಿಸಿ ಗೌರವಿಸುವುದಕ್ಕಾಗಿ ಮಧುರಾ ಪ್ರಕಾಶನದಿಂದ ಪ್ರದಾನ ಮಾಡಿದ "ಸುದ್ದಿಮನೆ ಚೇತನ" ರಾಜ್ಯಮಟ್ಟದ ಚೊಚ್ಚಲ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಸದಾ ಒತ್ತಡದಲ್ಲಿರುವ ಸುದ್ದಿಮನೆ ಪತ್ರಕರ್ತರು, ವರದಿಗಾರರು ಕಳಿಸುವ ಸುದ್ದಿಗಳ ಲೋಪದೋಷಗಳನ್ನು ಸರಿಪಡಿಸಿ ಓದುಗ–ರಿಗೆ ದೋಷ ರಹಿತ ಸುದ್ದಿಗಳನ್ನು ಕೊಡುವಲ್ಲಿ ಹೆಚ್ಚಿನ ಜವಾಬ್ದಾರಿ ಇರುತ್ತದೆ.

ಇತ್ತೀಚಿನ ಟಿ.ವ್ಹಿ. ಮತ್ತು ಸಾಮಾಜಿ–ಕ ಜಾಲತಾಣಗಳ ಅಬ್ಬರದ ನಡುವೆಯೂ ಪತ್ರಿಕೆಗಳು ವಿಶ್ವಾಸಾರ್ಹತೆ ಉಳಿಸಿಕೊಂಡಿವೆ ಎಂದರೆ ಅದು ನೈಜತೆ ಮತ್ತು ವಸ್ತುನಿಷ್ಠ ಸುದ್ದಿಗಳಿಂದಾಗಿ ಎಂಬುವದು ಸತ್ಯ. ಸುದ್ದಿಮನೆಯಲ್ಲಿ ಮತ್ತು ಹೊರಗೆ ಕೆಲಸ ಮಾಡುವ ಎಲ್ಲಾ ಪತ್ರಕರ್ತರು ನಿತ್ಯ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ನಿರಂತರ ಓದಿನಿಂದ ನಮ್ಮ ಸಾಮಾನ್ಯ ಜ್ಞಾನ ವೃದ್ಧಿಸಿಕೊಳ್ಳಲು ಸಾಧ್ಯ. ಪತ್ರಿಕೆಗಳನ್ನು ಕೊಂಡು ಓದುವ ಹೊಸ ಹೊಸ ಓದುಗರನ್ನು ಹೆಚ್ಚಿಸುವ ಜವಾಬ್ದಾರಿ ಪತ್ರಕರ್ತರ ಮೇಲಿದೆ ಎಂದರು.

ಬದುಕಿರುವ ತಂದೆ–ತಾಯಿಗಳ ಆರೈಕೆ ಸರಿಯಾಗಿ ಮಾಡದೇ ಇರುವ ಇಂದಿನ ದಿನಗಳಲ್ಲಿ ತಮ್ಮ ತಂದೆಯ ಸ್ಮರಣಾರ್ಥ ಪತ್ರಕರ್ತ ಮಹೇಶ ಮನ್ನಯ್ಯನವರಮಠ ಅವರು ತಮ್ಮ ಮಧುರಾ ಪ್ರಕಾಶನದ ವತಿಯಿಂದ ಸುದ್ದಿಮನೆಯ ಶ್ರಮಿಕ ಪತ್ರಕರ್ತರನ್ನು ಗುರುತಿಸಿ 'ಸುದ್ದಿಮನೆ ಚೇತನ' ಪ್ರಶಸ್ತಿ ಕೊಡುತ್ತಿರುವದು ಶ್ಲಾಘನೀಯ. ಮುಂಬರುವ ದಿನಗಳಲ್ಲಿ ರಾಜ್ಯಮಟ್ಟದ ವಿವಿಧ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತೆರೆಮರೆಯ ಸಾಧಕ ಪತ್ರಕರ್ತರನ್ನು ಗುರುತಿಸಿ ಗೌರವಿಸುವಂತಾಗಲಿ ಎಂದರು.



ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆನಂದ ಧಲಬಂಜನ ಮಾತನಾಡಿ, ಪತ್ರಕರ್ತರು ಸುದ್ದಿಗಳನ್ನು ತಿದ್ದಿತೀಡಿ, ಚಲನಚಿತ್ರದ ಹಿಂದಿನ ಛಾಯಾಗ್ರಾಹಕರಂತೆ ಕೆಲಸ ಮಾಡುವ ಸುದ್ದಿಮನೆ ಪತ್ರಕರ್ತರನ್ನು ಗುರುತಿಸುವುದಕ್ಕಾಗಿ ಮಧುರಾ ಪ್ರಕಾಶನದ ವತಿಯಿಂದ ಸುದ್ದಿಮನೆ ಚೇತನ ಪ್ರಶಸ್ತಿ ಪ್ರಾರಂಭಿಸಿದ್ದು ಸ್ವಾಗತಾರ್ಹ. ಮುಂದಿನ ದಿನಗಳಲ್ಲಿ ಜಿಲ್ಲಾ ಕಾನಿಪ ಸಂಘದಲ್ಲಿ ಈ ಪ್ರಶಸ್ತಿಯನ್ನು ದತ್ತಿ ಪ್ರಶಸ್ತಿಯಾಗಿ ಸ್ಥಾಪಿಸಲು ಮನವಿ ಮಾಡಿದರು.

ಮಧುರಾ ಪ್ರಕಾಶನದ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ ಪ್ರಾಸ್ತಾವಿಕವಾಗಿ ಮಾತನಾಡಿ ಕೊವೀಡ್ನಲ್ಲಿ ಅಗಲಿದ ತಂದೆಯ ಸ್ಮರಣಾರ್ಥ ಸುದ್ದಿಮನೆ ಚೇತನ ಪ್ರಶಸ್ತಿ ಪ್ರಾರಂಭಿಸಿದ ಕಾರಣ ಮತ್ತು ಉದ್ದೇಶಗಳನ್ನು ಹಾಗೂ ಯಾವುದೇ ಪ್ರಚಾರವಿಲ್ಲದೆ ಸುದ್ದಿಮನೆಯಲ್ಲಿ ಕೆಲಸ ಮಾಡುವ ಪತ್ರಕರ್ತರ ನೋವು ನಲಿವು, ಒತ್ತಡದ ಕೆಲಸಗಳ ಕುರಿತು ಮಾತನಾಡಿದರು.

ಮಧುರಾ ಪ್ರಕಾಶನದ ವತಿಯಿಂದ ಹುನ್ನೂ–ರಿನ ಹಿರಿಯ ಪತ್ರಕರ್ತ ಈಶ್ವರ ಹನಗಂಡಿ ಅವರಿಗೆ ನಗದು ಐದು ಸಾವಿರ, ಸ್ಮರಣಿಕೆ ಪತ್ರದೊಂದಿಗೆ "ಸುದ್ದಿಮನೆ ಚೇತನ" ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಿಲ್ಲಾ ಕಾನಿಪ ಸಂಘದಿಂದ 2025 ನೇ ಸಾಲಿನ ಸಮಾಜವೀರ ದತ್ತಿ ಪ್ರಶಸ್ತಿ ಪಡೆದ ಮುಧೋಳದ ಪತ್ರಕರ್ತ ಎಂ. ಎಚ್. ನದಾಫ್ ಅವರನ್ನು ಕೂಡ ಸನ್ಮಾನಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಎಸ್. ಆಯ್. ಕುಂದಗೋಳ ಮಾತನಾಡಿದರು. ಮಧುರಾ ಪ್ರಕಾಶನದ ಸಂಸ್ಥಾಪಕರಾದ ಶ್ರೀಮತಿ ಅನಸೂಯಾ ಮನ್ನಯ್ಯನವರಮಠ, ಕೆಎಲ್ಇ ಸ್ಥಾನಿಕ ಆಡಳಿತ ಮಂಡಳಿ ಸದಸ್ಯ ಸಂತೋಷ ಹುದ್ದಾರ, ಜಿಲ್ಲಾ ಕಾನಿಪ ಸದಸ್ಯ ಎಸ್. ಎಸ್. ಈಶ್ವರಪ್ಪಗೋಳ, ಹಿರಿಯರಾದ ಶ್ರೀಶೈಲಪ್ಪ ವಜ್ಜರಮಟ್ಟಿ ಅತಿಥಿಗಳಾಗಿ ಭಾಗವಹಿಸಿದ್ದರು.

ಮಹಾಂತೇಶ ಮನ್ನಯ್ಯನವರಮಠ, ಜಿ. ಎಸ್. ಗೊಂಬಿ, ಕುಮಾರ ಮನ್ನಯ್ಯನವರಮಠ, ಪತ್ರಕರ್ತರಾದ ಎಂ. ಎನ್. ನದಾಫ್, ನಾರನಗೌಡ ಉತ್ತಂಗಿ, ಹನೀಫ್ ಚಿಕ್ಕೋಡಿ, ರಾಜು ನಾಪ್ಡಿ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.

ಪತ್ರಕರ್ತರಾದ ಇಲಾಹಿ ಜಮಖಂಡಿ ಸ್ವಾಗತಿಸಿದರು. ಚಂದ್ರಶೇಖರ ಮೋರೆ ಸೊಗಸಾಗಿ ನಿರೂಪಿಸಿದರು. ಶಿವಲಿಂಗ ಸಿದ್ನಾಳ ವಂದಿಸಿದರು.

## ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ: ಡಾ. ಎಸ್.ಎಸ್. ಬಿರಾದಾರ



**ಬಾಗಲಕೋಟೆ :** ಸೋಲಿಗೆ ಸಮಯದ ಸರಿಯಾದ ಸದ್ಬಳಿಕೆ ಮಾಡಿಕೊಳ್ಳುದಿರುವುದೇ ಕಾರಣ, ಸಾಧನೆ ಮಾಡುವುದು ಬರಿ ಕನಸಿನಿಂದ ಆಗಲಾರದು ನಾವು ಅದರ ಜೊತೆಗೆ ಪರಿಶ್ರಮ ಹಾಕಬೇಕು ಎಂದು ಬಸವೇಶ್ವರ ದೈಹಿಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್. ಎಸ್. ಬಿರಾದಾರ ಹೇಳಿದರು.

ನಗರದಬಿ.ವಿ.ವಿಸಂಘದಬಸವೇಶ್ವರ ಕಲಾ ಮಹಾವಿದ್ಯಾಲಯದ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಪಿ.ಯು.ಸಿ. ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಹಾಗೂ ಕ್ರೀಡೆ, ಸಾಂಸ್ಕೃತಿಕ, ಎನ್.ಸಿ.ಸಿ , ಎನ್.ಎಸ್.ಎಸ್, ರೋವರ್ ರೇಂಜರ್ ಚಟುವಟಿಕೆಗಳ ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವುದರ ಮೂಲಕ ಉದ್ಘಾಟಿಸಿ ಮಾತನಾಡಿ ಅವರು ಗುರು–ಶಿಷ್ಯರಸಂಬಂಧವನ್ನುಈಮಹಾವಿದ್ಯಾಲಯವು ಎತ್ತಿ ತೋರಿಸುತ್ತದೆ. ವಿದ್ಯಾರ್ಥಿಗಳು ಶಿಸ್ತಿನಿಂದ ಇರಬೇಕು. ಸಮಯದೊಂದಿಗೆ ನಾವು ಓಡಬೇಕು ಇಲ್ಲವಾದರೆ ತಟಸ್ಥರಾಗಬೇಕಾಗುತ್ತದೆ ಎಂದರು.

ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ ಸಾಧಕರಾಗಲು ಸುರಕ್ಷಿತ ವಲಯದಿಂದ ಹೊರ ಬರಬೇಕು. ಇಲ್ಲದಿದ್ದರೆ ಸಾಧನೆ ಮರಿಚೀಕೆಯಾಗುತ್ತದೆ.ಯಶಸ್ಸಿನ ಮೆಟ್ಟಿಲೇರಲು ಸವಾಲುಗಳನ್ನು ಎದುರಿಸುವ ಮನೋಭಾವನೆ ಬೆಳಿಸಿಕೋಳ್ಳಿ ಎಂದರು.

ಭಕ್ತಿ, ಶಕ್ತಿ, ಶ್ರದ್ಧೆಯಿಂದ ಮಾತ್ರ ಸಾಧನೆ ಮಾಡಲು ಸಾಧ್ಯ. ಬದುಕಿನಲ್ಲಿ ನಮಗೆ ಸ್ಪಷ್ಟತೆ ಇರಬೇಕು. ಮಾನಸಿಕ ಸ್ಥಿರತೆ ಮುಖ್ಯ,ಗೊಂದಲಗಳನ್ನು ಬಗೆಹ–ರಿಸುವ ಜಾಣ್ಮೆ ನಮ್ಮಲ್ಲಿರಲಿ, ಪರಿಶ್ರಮಕ್ಕೆ ಮಿತಿಗಳಿಲ್ಲ ,ಎಷ್ಟೇ ಅಡೆತಡೆಗಳು ಬಂದರು ನಾವು ಪ್ರಯತ್ನದ ಮೂಲಕ ಅವುಗಳನ್ನು ಮೆಟ್ಟಿ ನಿಲ್ಲುವ ಆತ್ಮಸ್ಥೈರ್ಯ ರೂಢಿಸಿಕೊಳ್ಳಬೇಕು ಅಂದಾಗ ಪ್ರಯತ್ನಕ್ಕೆ ಫಲ ಸಿಗುತ್ತದೆ. ಸೋಲಿಗೆ ತಲೆ ಬಾಗದೆ ನಮ್ಮ ಪ್ರಯತ್ನ ಮಾಡಬೇಕು. ಕೇವಲ ಅಕ್ಷರ ಕಲಿತರೆ ಅದು ಜ್ಞಾನವಲ್ಲ ಎಂದು ಹೇಳಿದರು.

ಪ್ರಾಚಾರ್ಯರಾದ ಎಸ್ ಆರ್ ಮೂಗನೂರಮಠ ಮಾತನಾಡಿ ಮಕ್ಕಳ ಬದುಕಲ್ಲಿ ಬಾಲ್ಯ ಮತ್ತು ವಿದ್ಯಾರ್ಥಿ ಜೀವನವು ಅಮೂಲ್ಯ ಘಟ್ಟಗಳಾಗಿದ್ದು ಅವರನ್ನು ವಿದ್ಯೆಯಿಂದ ವಂಚಿತರನ್ನಾಗಿ ಮಾಡಿದರೆ ಕಷ್ಟಕರ ಜೀವನಕ್ಕೆ ತಳ್ಳಿದಂತಾಗುತ್ತದೆ. ವ್ಯಕ್ತಿಯ ವಿಕಸನವು ಅವನ ಆಲೋಚನೆಯ ಮೇಲಿರುತ್ತದೆ. ಜ್ಞಾನ ಮತ್ತು ಶರೀರದ ಅಂಗಾಂಗಗಳನ್ನು ಸರಿಯಾಗಿ ಬಳಸಿಕೊಂಡಾಗ ಮಾತ್ರ ಸಾಧನೆಯ ದಾರಿ ಸುಲಭವಾಗುತ್ತದೆ. ಸಾಮರ್ಥ್ಯವನ್ನು ಸರಿಯಾಗಿ ಉಪಯೋಗಿಸಕೊಂಡರೆ ಸಾಧನೆಯ ಹೆಮ್ಮರವಾಗಬಹುದು. ಸಮಯ ಪ್ರಜ್ಞೆ ಎನ್ನುವುದು ಬಹಳ ಮುಖ್ಯ ನಿರಂತರ ಪ್ರಯತ್ನ ಹಾಗೂ ಕಠಿಣ ಪರಿಶ್ರಮದಿಂದ ಅಸಾಧ್ಯವೂ ಸಹ ಸಾಧ್ಯವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಸಮಿತಿಯ ಸಂಂ–ಯೋಜಕಾರದ ಡಾ. ಆರ್. ಎಮ್. ಬೆಣ್ಣೂರ, ಎನ್ ಎಸ್ ಎಸ್ ಘಟಕದ ಸಂಯೋಜಕರಾದ ಡಾ. ಆರ್. ಆರ್. ಅರಿಸಿನಗೋಡಿ, ಕ್ರೀಡಾ ವಿಭಾಗದ ನಿರ್ದೇಶಕರಾದ ಎಮ್.ಎಮ್.ದೇವನಾಳ ಮತ್ತು ವಿಧ್ಯಾರ್ಥಿ ಪ್ರತಿನಿಧಿಗಳಾದ ಸಚಿನ್ ಕೆಂಪಗೊಂಡದ ,ಪ್ರಿಯಾಂಕಾ ನಾಯಕ ಸೇರಿದಂತೆ ಮಹಾವಿದ್ಯಾಲಯದ ಬೋಧಕ– ಬೋಧಕೇತರ ಸಿಬ್ಬಂದಿಗಳು ಹಾಗೂ ವಿಧ್ಯಾರ್ಥಿಗಳು ಉಪಸ್ಥಿತರಿದ್ದರು.

# ಒಳ್ಳೆಯ ಮಾತುಗಳು ಜಗತ್ತಿನ ರತ್ನಗಳು





**ಜಮಖಂಡಿ :** ಅನ್ನ, ನೀರು ಮತ್ತು ಒಳ್ಳೆಯ ಮಾತುಗಳು ಇವು ಜಗತ್ತಿನ ಮೂರು ರತ್ನಗಳು. ಪವಿತ್ರವಾದ ಶ್ರಾವಣ ಮಾಸದಲ್ಲಿ ಒಳ್ಳೆಯ ಮಾತುಗಳನ್ನು ಕೇಳಬೇಕು. ಆದ್ದ–ರಿಂದ ಸಮಾಜದಲ್ಲಿ ಒಳ್ಳೆಯ ಮಾತುಗಳನ್ನು ಬಿತ್ತುವಕಾರ್ಯವನ್ನುಓಲೆಮಠಮಾಡುತ್ತಿದೆ ಎಂದು ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಶ್ರಾವಣ ಮಾಸದ ಪ್ರಯುಕ್ತ ಓಲೆಮಠದ ಆಶ್ರಯದಲ್ಲಿ ಜುಲೈ 25 ರಿಂದ ಆಗಸ್ಟ 19 ರ ವರಗೆ ನಡೆದ ವಚನ ಶ್ರಾವಣ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲು ಬುಧವಾರ ಸಂಜೆ ನಡೆದ ವಚನ ಶ್ರಾವಣ ಮಂಗಲೋತ್ಸವದ ಸಾನಿಧ್ಯವಹಿಸಿ ಅವರು ಆಶೀರ್ವಚನ ನೀಡಿದರು. ಭಾರತೀಯ ಸಂಸ್ಕೃತಿಯಲ್ಲಿ ಸಂಸ್ಕೃತಿಗೆ ಮನುಷ್ಯನಲ್ಲಿ ಪರಿವರ್ತನೆ ತರುವ ಶಕ್ತಿ ಸಾಮಥ–ರ್ಯವಿದೆ. ಆದ್ದರಿಂದ ಕೇಳಿದ ಮಾತುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ಸಾರ್ಥಕ ಗೊಳಿಸಿಕೊಳ್ಳಬೇಕು ಎಂದರು.

ಸಿಂದಗಿ ಸಾರಂಗ ಮಠದ ಡಾ. ವಿಶ್ವಪ್ರಭು ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯವಹಿಸಿ ಮಾತನಾಡಿ, ಧರ್ಮ ಮತ್ತು ಭಕ್ತಿ ಇದ್ದುದಕ್ಕೆ ಬಹಳಷ್ಟು ಮಠಗಳಿವೆ. ಜಮಖಂಡಿ ನಗರ ಧಾರ್ಮಿಕವಾಗಿ ಎಲ್ಲರನ್ನು ಆಕರ್ಷಿಸುತ್ತದೆ. ಪ್ರಕೃತಿ ಪ್ರೀತಿಸುವ ಜನರು ಜಮಖಂಡಿಯಲ್ಲಿ ಇದ್ದಾರೆ ಎಂದು ಆಶೀರ್ವಚನ ನೀಡಿದರು.

ಕರ್ನಾಟಕದಲ್ಲಿ ಅತ್ಯಂತ ಸಮನ್ವಯ ಇರುವ ಭಕ್ತರು ಜಮಖಂಡಿಯಲ್ಲಿ ಇದ್ದಾರೆ. ಯಾವ ಭಾವದಿಂದ ಭಕ್ತರು ಮಠಕ್ಕೆ ಬರುತ್ತಾರೆ ಅದನ್ನೆ ಭಕ್ತರು ಪಡೆದುಕೊಳ್ಳುತ್ತಾರೆ. ಭಕ್ತರು ಭಕ್ತಿಯಿಂದ ಬರುವಂತ ಕಾರ್ಯಗಳು ಓಲೆಮಠದಿಂದ ನಡೆಯುತ್ತಿವೆ. ಸಮನ್ವಯತೆ, ಸಹಬಾಳ್ವೆ, ಪ್ರೀತಿ, ವಿಶ್ವಾಸ, ಗೌರವದಿಂದ ಭಕ್ತರು ನಡೆದುಕೊಳ್ಳಬೇಕು. ಅಧ್ಯಾತ್ಮಿಕ ಕ್ಷೇತ್ರಕ್ಕೆ ಏನಾದರೂ ಕೊಡುಗೆ ನೀಡುವ ಹಂಬಲದಿಂದ ಆನಂದ ದೇವರು ಶ್ರೀಗಳು ಓಲೆಮಠಕ್ಕೆ ಬಂದಿದ್ದಾರೆ. ಅದಕ್ಕೆ ಭಕ್ತರ ಸುಮಂಗಲವಿರಲಿ ಎಂದರು.

ಶೂರ್ಪಾಲಿಯ ಸಾರಂಗ ಮಠದ ಮಾತೋಶ್ರೀ ಸುನಂದಮ್ಮಾತಾಯಿ ಸಾನಿಧ್ಯ ವಹಿಸಿ ಮಾತನಾಡಿ, ಹೊಟ್ಟೆ ಹಸಿದಾಗ ಬುಟ್ಟಿಯಲ್ಲಿ ರೊಟ್ಟಿ ಇರಲಿಲ್ಲ; ಹೊಟ್ಟೆ ತುಂಬಿದಾಗಬುಟ್ಟಿಯಲ್ಲಿರೊಟ್ಟಿತುಂಬಿದ್ದವು ಎಂದು ಓಲೆಮಠದ ಲಿಂ. ಡಾ. ಚೆನ್ನಬಸವ ಮಹಾಸ್ವಾಮಿಗಳು ಹೇಳುತ್ತಿದ್ದರು ಎಂದು ಸ್ಮರಿಸಿದರಲ್ಲದೆ ಜಮಖಂಡಿಯ ಓಲೆಮಠವು ಬಸವಕಲ್ಯಾಣ ಆಗುವುದರಲ್ಲಿ ಸಂಶಯವಿಲ್ಲ ಎಂದರು.

ಮಾಜಿ ಶಾಸಕ ಆನಂದ ನ್ಯಾಮಗೌಡ ಮುಖ್ಯ ಅತಿಥಿಯಾಗಿ ಮಾತನಾಡಿ, ಸಾಮಾನ್ಯವಾಗಿ ಪ್ರವಚನ ಕಾರ್ಯಕ್ರಮಗಳು ಮಠದಲ್ಲಿಯೇ ನಡೆಯುವುದು ವಾಡಿಕೆ. ಆದರೆ, ಓಲೆಮಠದ ಪೂಜ್ಯರು ಪ್ರತಿ ಓಣಿ ಓಣಿಗೆ ತೆರಳಿ ಪ್ರವಚನ ಕಾರ್ಯಕ್ರಮ ಹಮ್ಮಿಕೊಂಡಿರುವುದು ವಿಶೇಷವಾಗಿದೆ. ಜೀವನ ಹೇಗೆ ಸಾಗಿಸಬೇಕು ಎಂಬುದನ್ನು ವಚನಗಳ ಮೂಲಕ ಅರಿವು ಮೂಡಿಸಿರುವುದು ಸ್ತುತ್ಯಾರ್ಹವಾಗಿದೆ ಎಂದರು.

ಉದ್ದಿಮೆದಾರ ಉಮೇಶ ಮಹಾಬಳಶೆಟ್ಟಿ, ಹಿರಿಯ ವಕೀಲ ಎನ್. ಎಸ್. ದೇವರವರ ಮಾತನಾಡಿದರು. ಗುರುಸಿದ್ಧಯ್ಯ ಅವರವಾಡಮಠ ಆನಂದ ದೇವರು ಶ್ರೀಗಳ ಕುರಿತು ಬರೆದ ಸ್ವರಚಿತ ಕವನ ಓದಿದರು. ವಾರಕರಿ ಸಂಪ್ರದಾಯದ ಸುನೀಲ ಬಾಬರ ಮಹಾರಾಜರು ಆಶೀರ್ವಚನ ನೀಡಿದರು. ಕಲ್ಯಾಣ ಮಠದ ಗೌರಿಶಂಕರ ಶಿವಾಚಾರ್ಯ ಮಹಾಸ್ವಾಮಿಗಳು ಜಾನಪದ ಹಾಡು ಹಾಡಿ ರಂಜಿಸಿದರು. ಕಸ್ತೂರಿ ಜೈನಾಪುರ ಕವನ ವಾಚನ ಮಾಡಿದರು. ಭವಾನಿ ಜಾಲಿಹಾಳ ವಚನ ನೃತ್ಯ, ಶ್ರೇಯಾ ಘಟ್ನಟ್ಟಿ ಭರತನಾಟ್ಯ, ಚಿತ್ರಕಲಾ ಶಿಕ್ಷಕಿ ಸಾನಿಯಾ ಹುನಗಂದ ಹಾಗೂ ತಂಡದವರು ಅನುಭವ ಮಂಟಪ ರೂಪಕ ಪ್ರದರ್ಶಿಸಿದರು. ವಾರಕರಿ ಶಿಕ್ಷಣ ಸಂಸ್ಥೆಯ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿ ಬಳಗದಿಂದಪಾವುಲಭಜನೆಪ್ರದರ್ಶಿಸಿದರು. ಲಿಂಗೈಕ್ಯ ಡಾ. ಚೆನ್ನಬಸವ ಮಹಾಸ್ವಾಮಿಗಳ ಗದ್ದುಗೆ ಮತ್ತು ಮಂಟಪದ ನೀಲನಕ್ಷೆಯನ್ನು ಬಿಡುಗಡೆ ಮಾಡಲಾಯಿತು.

ಕಡಪಟ್ಟಿಯಜಗದೀಶ್ವರಮಠದಮಾತೋಶ್ರೀ ಪ್ರಮಿಳಾತಾಯಿ,ಪವಿತ್ರವನದ ಬಿ. ಕೆ. ಭಾರತಿ ಅಕ್ಕನವರು ಸಾನಿಧ್ಯ ವಹಿಸಿದ್ದರು. ನಗರಸಭೆ ಅಧ್ಯಕ್ಷ ಈಶ್ವರ ವಾಳೆನ್ನವರ, ನಗರಸಭೆ ಸದಸ್ಯ ಪರಮಾನಂದ ಗವರೋಜಿ, ಡಾ. ವಿಜಯಲಕ್ಷ್ಮಿ ತುಂಗಳ, ರಾಜೇಶ್ವರಿ ಹಿರೇಮಠ, ರೋಟರಿ ಸಂಸ್ಥೆಯ ಅಧ್ಯಕ್ಷ ರಾಜಶೇಖರ ವಾರದ, ನಗರಸಭೆ ಸದಸ್ಯ ದಾನೇಶ ಘಾಟಗೆ, ನರಸಿಂಹ ಕಲ್ಲೋಳ್ಳಿ, ಪೌರಾಯುಕ್ತ ಜ್ಯೋತಿ ಗಿರೀಶ ಎಸ್., ಕಾಡು ಮಾಳಿ, ಶಾಮರಾವ ಘಾಟಗೆ, ಡಾ. ಎಚ್. ಜಿ. ದಡ್ಡಿ, ಸಂತೋಷ ತಳಕೇರಿ ಇತರರು ಭಾಗವಹಿಸಿದ್ದರು.

ಗದ್ದುಗೆ ಮತ್ತು ಮಂಟಪ ನಿರ್ಮಾಣ ಸೇವೆಗೆ ರೂ. 10 ಲಕ್ಷ ದೇಣಿಗೆ ನೀಡಿದ ರಾಜು ಗಸ್ತಿ, ಲಿಂಗೈಕ್ಯ ಡಾ. ಚೆನ್ನಬಸವ ಮಹಾಸ್ವಾಮಿಗಳ ಮೂರ್ತಿ ಸೇವೆ ಸಲ್ಲಿಸಿದ ವೀರಭದ್ರಯ್ಯಾ ಗಾರವಾಡಮಠ, ಓಲೆಮಠದ ಕಾರ್ಯಕಾರಿ ಸಮಿತಿ ಸದಸ್ಯರನ್ನು, ಓಣಿ ಓಣಿಯಲ್ಲಿ ನಡೆದ ವಚನ ಶ್ರಾವಣ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಸಂಪನ್ಮೂಲ ವ್ಯಕ್ತಿಗಳನ್ನು ಸನ್ಮಾನಿಸಲಾಯಿತು.

ಮಂದಾಕಿನಿ ಬಡಚಿ (106), ಅಡವೆವ್ವ ಅತ್ತೆಪ್ಪನವರ (104), ನಿಂಗಪ್ಪ ಪಡೆನ್ನವರ (104), ಚನ್ನಮ್ಮತಾಯಿ ಹಿಟ್ಟಿನಮಠ (95), ಸಂಗಪ್ಪ ನಾಂದ್ರೇಕರ, ತಂಗೆವ್ವ ಬಾಬಾನಗರ (97), ಪತ್ರಕರ್ತ ಎಂ. ಸಿ. ಗೊಂದಿ (93) ಹಿರಿಯರನ್ನು ಸನ್ಮಾನಿಸಲಾಯಿತು. ಡಾ. ಎನ್. ವಿ. ಅಸ್ಕಿ ಸೊಗಸಾಗಿ ನಿರೂಪಿಸಿದರು. ಓಲೆಮಠದ ಆನಂದ ದೇವರು ಶ್ರೀಗಳು ಶರಣು ಸಮರ್ಪಿಸಿದರು.

## ಪ್ರಗತಿಪರ ಸಾಧನೆಗಳ ಸರದಾರ ಡಿ.ದೇವರಾಜ ಅರಸು ಅವರಿಗೆ ಗೌರವ ಅರ್ಪಿಸಿದ ಗಣ್ಯರು

**ಬೈಲಹೊಂಗಲ :** ಪ್ರಗತಿಪರ ಸಾಧನೆಗಳ ಸರದಾರ, ಸಾಮಾಜಿಕ ಪರಿವರ್ತನೆಯ ಹರಿಕಾರ, ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆ ನಿಮಿತ್ತ ಬೈಲಹೊಂಗಲ ಪಟ್ಟಣದ ಬೈಪಾಸ್ ರಸ್ತೆಯಲ್ಲಿರುವ ಡಿ. ದೇವರಾಜ ಅರಸು ಭವನದಲ್ಲಿ ಡಿ. ದೇವರಾಜ ಅರಸು ಅವರ ಭಾವಚಿತ್ರಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳಗಾವಿ ಜಿಲ್ಲಾ ಮಾಜಿ ಅಧ್ಯಕ್ಷರಾದ ಮೋಹನ ಬಸನಗೌಡ ಪಾಟೀಲ, ಬೈಲಹೊಂಗಲ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮೃತ್ಯುಂ–ಜಯ ಬ. ಚಿನಗುಡಿ, ವಿಸ್ತೀರ್ಣಾಧಿಕಾರಿ ಮಂಜುನಾಥ ಕರಿಸಿರಿ, ರಾಷ್ಟ್ರೀಯ ಬಸವದಳದ ಬೈಲಹೊಂಗಲ ಘಟಕದ ಪ್ರಧಾನ ಕಾರ್ಯದರ್ಶಿ ಈರಪ್ಪ ಸೋಮಪ್ಪ ಸನಮನಿ, ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಮೇಲ್ವಿಚಾರಕರಾದ ದೇಮಪ್ಪ ಪಾಂಡಪ್ಪ ಹಜೇರಿ ಗೌರವ ಸಲ್ಲಿಸಿದರು.



## ಜಾತ್ರೆ ಉತ್ಸವಗಳಿಂದ ಆಧ್ಯಾತ್ಮದ ಶಕ್ತಿ ಗಟ್ಟಿಗೊಳ್ಳುವುದು

**ರಬಕವಿ–ಬನಹಟ್ಟಿ :** ಜಾತ್ರೆ ಉತ್ಸವಗಳಿಂದ ಆಧ್ಯಾತ್ಮದ ಶಕ್ತಿ ಗಟ್ಟಿಗೊಳ್ಳುವುದೆಂದು ಜಮಖಂಡಿ ಕಬ್ಬು ಬೆಳೆಗಾರರ ಸಂಘದ ತಾಲೂಕಾಧ್ಯಕ್ಷ ಹಣಮಂತ ಮಗದುಮ ಹೇಳಿದರು.

ಅವರು ತಾಲೂಕಿನ ನಾವಲಗಿ–ಕಲಹಳ್ಳಿ ಸೀಮೆಯ ಲಕ್ಕವ್ವದೇವಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು. ಮಠಮಂದಿರಗಳುಆಧ್ಯಾತ್ಮದಮಾರ್ಗವನ್ನು ತೋರಿಸುವ ಮೂಲ ಸ್ಥಾನಗಳಾಗಿದ್ದು ಜೊತೆಗೆ ಸಂಸ್ಕಾರ, ಸಂಸ್ಕೃತಿ ಬೆಳೆಸುತ್ತವೆ. ಆದ್ದರಿಂದ ಎಲ್ಲರೂ ಭಕ್ತಿಯ ಮಾರ್ಗದಲ್ಲಿ ನಡೆದಾಗ ಮಾತ್ರ ಉಳಿಗಾಲವಿದೆ. ಸನಾತನ ಹಿಂದೂ ಧರ್ಮದ ಆಚಾರ ವಿಚಾರ ಸೇ–ರಿದಂತೆ ಸಾಂಪ್ರದಾಯಿಕ ಪದ್ಧತಿಗಳನ್ನು ತಿಳಿಸುವ ಮೂಲಕ ಗಟ್ಟಿಗೊಳಿಸಬೇಕಿದೆ. ಹಿಂದೂಗಳಿಗೆ ಶ್ರಾವಣವು ಅತ್ಯಂತ ಪವಿತ್ರ ಮಾಸವಾಗಿದ್ದು ಮಠ ಮಂದಿರಗಳಲ್ಲಿ ಧಾರ್ಮಿಕ ಕಾರ್ಯಗಳು ಜರುಗುವ ಮೂಲಕ ಸನಾತನ ಧರ್ಮದ ಕೀರ್ತಿಯನ್ನು ಹೆಚ್ಚಿಸುತ್ತಿವೆ.

ಪ್ರತಿಯೊಬ್ಬರು ನಿಷ್ಕಲ್ಮಶ ಸೇವೆ ಸಲ್ಲಿಸಿದರೆ ಮಾತ್ರ ನಿಶ್ಚಿತವಾಗಿಯು ಪುಣ್ಯ ಪ್ರಾಪ್ತಿಯಾಗುವುದು. ಇದರ ಜೊತೆಗೆ ಸಂಘಟನಾತ್ಮಕ ಶಕ್ತಿ ಹೆಚ್ಚಿಸುವ ಮೂಲಕ ಎಲ್ಲರು ಒಗ್ಗಟ್ಟಿನಿಂದ ಜೀವನ ನಡೆಸಲು ಸಹಕಾರಿಯಾಗುತ್ತದೆಂದು ಹಣಮಂತ ಮಗದುಮ್ ಹೇಳಿದರು.

ಈ ಸಂದರ್ಭದಲ್ಲಿ ದುಂಡಪ್ಪ ಕಾಂತಿ, ಹಣಮಂತ ಕಂಚು, ಭುಜಬಲಿ ಶಿರಹಟ್ಟಿ, ಚನ್ನಬಸು ಕಂಚು, ಶ್ರೀಶೈಲ ಜಮಖಂಡಿ, ಮಾರುತಿ ಬನಹಟ್ಟಿ, ಹಣಮಂತ ಹಿಪ್ಪರಗಿ, ಶಿವಪ್ಪ ಮಗದುಮ್, ಬಸಪ್ಪ ಸವದಿ, ಶಿವನಪ್ಪ ಮೇತ್ರಿ, ಅಕ್ಷಯ ಮೇತ್ರಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

### ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ನೌಕರರ ಸಂಘದ ಸಭೆ

## ಶೋಷಿತ ಸಮುದಾಯಗಳು ಸಂಘಟನೆ ನಿರಂತರ ಪ್ರಕ್ರಿಯೆ: ಸಚಿವ ಸತೀಶ್ ಜಾರಕಿಹೊಳಿ




**ಬೆಂಗಳೂರು :** ಪರಿಶಿಷ್ಟ ಪಂಗಡದಲ್ಲಿರುವ ವಾಲ್ಮೀಕಿನಾಯಕ ಸಮುದಾಯವೂ ಸೇ–ರಿದಂತೆಎಲ್ಲತಳಸಮುದಾಯಗಳುಸಂಘಟಿ–ತರಾದರೆ ಮಾತ್ರ ಸಾಮಾಜಿಲ,ರಾಜಕೀಯ, ಆರ್ಥಿಕ ವಿಕಸನ ಸಾಧ್ಯ.ಸಂಘಟನೆ ಕಾರ್ಯ ಎಂಬುದು ನಿರಂತರ ಪ್ರಕ್ರಿಯೆ ಎಂದು ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಹೇಳಿದರು.

ಇಲ್ಲಿನ ಗಾಂಧಿನಗರದ ಸ್ಯಾಂಕ್ಟಮ್ ಹೋಟೇಲಿನ ಸಭಾಂಗಣದಲ್ಲಿ (ಮಂಗಳವಾರ,ಅಗಸ್ಟ್20)ಆಯೋಜಿಸಿದ್ದ ಪರಿಶಿಷ್ಟ ಪಂಗಡಗಳ ನೌಕರರು ಹಾಗೂ ಜನಪ್ರತಿನಿಧಿಗಳ ಸಮಾಲೋಚನೆ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

ಶೋಷಿತ ಸಮಾಜದಲ್ಲಿ ಶಿಕ್ಷಣ ಪಡೆದು ನೌಕರಿ ಮಾಡುತ್ತಿರುವ ಜನರ ಮೇಲೆ ಹೆಚ್ಚು ಜವಾಬ್ದಾರಿಗಳಿವೆ.ಪ–ರಿಶಿಷ್ಟ ಪಂಗಡದ ನೌಕರರು ತಮ್ಮ ವೃತ್ತಿ ಸಂಬಂಧಿತ ಮುಂಬಡ್ತಿ,ವರ್ಗಾವಣೆ, ಸ್ಥಳ ನಿಯುಕ್ತಿ ಸೇರಿದಂತೆ ಅನೇಕ ವಿಷಯಗಳಲ್ಲಿ ಎದುರಿಸುತ್ತಿರುವ ಸಮಸ್ಯೆ ,ಸವಾಲುಗಳನ್ನು ಸಂಘಟಿ–ತರಾದಾಗ ಪರಿಹಾರ ಕಂಡುಕೊಳ್ಳಲು ಮಾರ್ಗಗಳು ದೊರೆಯುತ್ತವೆ.ಕಾನೂನು ತಜ್ಞ ಎಲ್.ಜಿ.ಹಾವನೂರ ಹಾಗೂ ಅವ–ರಿಗಿಂತ ಹಿಂದಿನಿಂದಲೂ ಸಮಾಜದ ಸಂಘಟನೆಗೆ ಅನೇಕರು ಶ್ರಮಿಸಿದ್ದಾರೆ. ಇದೊಂದು ನಿರಂತರ ಪ್ರಕ್ರಿಯೆ, ಪ್ರತಿಯೊಬ್ಬ ಪ್ರಜ್ಞಾವಂತರು ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಡಾ.ಪ್ರಸನ್ನಾನಂದ ಮಹಾಸ್ವಾಮಿಗಳು ಮಾತನಾಡಿ, ಆದಿಕವಿ ಮಹರ್ಷಿ ವಾಲ್ಮೀಕಿ ಹಾಗೂ ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ನಾವೆಲ್ಲ ಅಳವಡಿಸಿಕೊಂಡು ಅನುಷ್ಠಾನಗೊಳಿಸಬೇಕು ಎಂದರು.

ಶಾಸಕರಾದ ಅನ್ನಪೂರ್ಣ ತುಕಾರಾಮ, ಕರೆಮ್ಮನಾಯಕ,ಅನೀಲ್ ಚಿಕ್ಕಮಾದು,ಟಿ. ರಘುಮೂರ್ತಿ,ಜೆ.ಎನ್.ಗಣೇಶ್ ,ಡಾ. ಎನ್.ಟಿ.ಶ್ರೀನಿವಾಸ ,ಚನ್ನಗಿರಿಯ ಮುಖಂಡ ಹೊದಿಗೆರೆ ರಮೇಶ ಮತ್ತಿತರರು ಮಾತನಾಡಿದರು.

ಕರ್ನಾಟಕ ರಾಜ್ಯ ಎಸ್ ಟಿ ನೌಕರರ ಸಂಘದ ಅಧ್ಯಕ್ಷ ಜಗದೀಶ್ವರಮೂರ್ತಿ ವೈ.ಪಿ.,ಲೋಕೇಶ ನಾಯಕ ,ಪಂಪಾಪತಿ ಮತ್ತಿತರರು ನೌಕರರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು. ಈ ಕುರಿತು ಸಚಿವರಿಗೆ ಮನವಿ ಅರ್ಪಿಸಿದರು.

ವಾಲ್ಮೀಕಿ ನಾಯಕ ಜನಾಂಗದ ನಿವೃತ್ತ ಹಿರಿಯ ಅಧಿಕಾರಿಗಳು, ನ್ಯಾಯಾಧೀಶರು ಸೇರಿದಂತೆ ಪ್ರಸ್ತುತ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೂರಾರು ನೌಕರರು ರಾಜ್ಯದ ಎಲ್ಲ ಜಿಲ್ಲೆಗಳಿಂದ ಆಗಮಿಸಿದ್ದರು. ಅನ್ನಪೂರ್ಣಪ್ರಾರ್ಥಿಸಿದರು,ಮಂಜುನಾಥ ಡೊಳ್ಳಿನ ಸ್ವಾಗತಿಸಿದರು, ಎ.ಸಿ.ತಿಪ್ಪೇಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು.ಡಾ.ಗವಿಸಿದ್ದಪ್ಪ ಮುತ್ತಾಳ ನಿರೂಪಿಸಿದರು.

## ಪ್ರವಾಹ ಪೀಡಿತ ಗ್ರಾಮಗಳಿಗೆ ಡಿಸಿ, ಸಿಇಓ ಭೇಟಿ ಪರಿಶೀಲನೆ

## ಪ್ರವಾಹ ಪರಿಸ್ಥಿತಿ, ಮಿರ್ಜಿಯಲ್ಲಿ ಕಾಳಜಿ ಕೇಂದ್ರ ಸ್ಥಾಪನೆ: ಡಿಸಿ



**ಬಾಗಲಕೋಟೆ :** ಕಳೆದ ಕೆಲವು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಕೃಷ್ಣಾ, ಘಟಪ್ರಭಾ ಹಾಗೂ ಮಲಪ್ರಭಾ ನದಿಗಳ ನೀರಿನ ಮಟ್ಟ ಹೆಚ್ಚಾಗಿ ಪ್ರವಾಹ ಪರಿಸ್ಥಿತಿ ಉಂಟಾಗುತ್ತಿದ್ದು, ಮುಧೋಳ ತಾಲೂಕಿನ ಮಿರ್ಜಿ ಗ್ರಾಮದಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಮುಧೋಳ ತಾಲೂಕಿನ ಪ್ರವಾಹ ಪೀಡಿತ ಮಿರ್ಜಿ ಗ್ರಾಮಕ್ಕೆ ಭೇಟಿ ನೀಡಿ, ಮಾತನಾಡಿದ ಅವರು ಮಿರ್ಜಿ ಗ್ರಾಮದ 12 ಕುಟುಂಬಗಳು ಬಾದಿತಗೊಂಡಿದ್ದು, ಆ ಕುಟುಂಬದ 62 ಜನ ಸಂತ್ರಸ್ತರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಿ, ಅಲ್ಲಿ ಊಟ, ವಸತಿ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಇನ್ನು ನೀರಿನ ಪ್ರಮಾಣ ಹೆಚ್ಚಾಗುತ್ತಿರುವದರಿಂದ ನದಿ ದಡದ ಗ್ರಾಮಗಳು ಹೆಚ್ಚಿನಪ್ರಮಾಣದಲ್ಲಿಬಾದಿತವಾಗುವಸಾಧ್ಯತೆಯಿದ್ದು, ಈ ಬಗ್ಗೆ ಮುಂಜಾಗ್ರತವಾಗಿ ಗ್ರಾಮಸ್ಥರು ಸುರಕ್ಷಿತ ಸ್ಥಳಗಳಿಗೆ ಇಲ್ಲವೇ ಜಿಲ್ಲಾಡಳಿತ ಸ್ಥಾಪಿಸಲಾದ ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ ಎಂದರು.

ಪ್ರಸ್ತುತ ಘಟಪ್ರಭಾ ನದಿಗೆ 65567 ಕ್ಯೂಸೆಕ್ಸ್ ನೀರು ಹರಿದು ಬರುತ್ತಿದ್ದು, ಇದರಿಂದ ಮುಧೋಳ ಹಾಗೂ ರಬಕವಿ–ಬನಹಟ್ಟಿ ತಾಲೂಕಿನ ಡವಳೇಶ್ವರ, ಮಿರ್ಜಿ, ಚನ್ನಾಳ, ಉತ್ತೂರು–ಜಾಲಿಬೇರ, ಮುಧೋಳ ಬ್ಯಾರೇಜ, ಇಂಗಳಗಿ, ಜಂಬಗಿ ಕೆಡಿ, ಕಸಬಾ ಜಂಬಗಿ, ತಿಪ್ಪಾಪೂರ ಹಾಗೂ ಮಾಚಕನೂರು ಸೇರಿ ಒಟ್ಟು 11 ಸೇತುವೆಗಳು ಮುಳುಗಡೆಯಾಗಿರುತ್ತವೆ. ಮುಧೋಳ ಯಾದವಾಡ ಸೇತುವೆಗೆ ಭೇಟಿ ನೀಡಿ ನೀರಿನ ಮಟ್ಟ ಪರಿಶೀಲಿಸಲಾಗಿ ಅದು ಕೂಡಾ ಇನ್ನು ಒಂದು ಅಥವಾ ಎರಡು ದಿನಗಳಲ್ಲಿ ಮುಳುಗಡೆಯಾಗುವ ಹಂತದಲ್ಲಿದೆ.

ನದಿ ಪಾತ್ರದಲ್ಲಿ ಸಾರ್ವಜನಿಕರು ಬರದಂತೆ ಎಚ್ಚ–ರಿಕೆಯ ಫಲಕಗಳನ್ನು ಹಾಕುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಭೇಟಿ ಸಮಯದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಮುಧೋಳ ತಹಶೀಲ್ದಾರ ಮಹಾದೇವ ಸನಮೂರೆ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

## ನನ್ನತ್ತೆ

ಅತ್ತೆಗೊಂದು ಕಾಲ ಸೊಸೆಗೊಂದು ಕಾಲ ಅಂತ ಗಾದೆ ಮಾತೊಂದು ಇದೆ. ಈ ಗಾದೆ ಮಾತು ಯಾಕೆ ನನಗೆ ಈಗ ನೆನಪಾಯಿತು ಎಂದರೆ. ಅತ್ತೆ ಸೊಸೆ ಎಳ್ಳು ನೀರು ಇದ್ದರೆ ಈ ಗಾದೆ ಮಾತಿಗೊಂದು ಅರ್ಥ ಬರುತ್ತದೆ ಆದರೆ ಈ ಗಾದೆ ಮಾತು ನನ್ನತ್ತೆ ನೋಡಿದರೆ ನನಗೆ ಅಪ್ರಸ್ತುತ ಎನ್ನಿಸುತ್ತದೆ. ಎಲ್ಲಾ ಅತ್ತೆ ಸೊಸೆ ಹೀಗೆ ಇರುವುದಿಲ್ಲ. ಕಾಲ ಬದಲಾಗಿದೆ.ಸ್ತ್ರೀ ಪುರುಷ ಔದ್ಯೋಗಿಕ ಕ್ಷೇತ್ರದಲ್ಲಿ ತೊಡಗಿಕೊಂಡ ಮೇಲೆ ಮಕ್ಕಳ ಲಾಲನೆ ಪಾಲನೆ ಹೊಣೆ ಅತ್ತೆಯದ್ದಾಗಿದೆ. ಅತ್ತೆ ಸೊಸೆ ಪಾಲಿಗೆ ತಾಯಿಯಂತಾದರೆ ಅತ್ತೆ ಸೊಸೆ ಬಾಂಧವ್ಯ ಹಾಲು ಸಕ್ಕರೆಯಂತಾಗಿ ಸಂಸಾರ ನೌಕೆ ಸುಖದಿಂದ ಸಾಗುತ್ತದೆ. ನನಗೆ ಇಲ್ಲಿ ನನ್ನತ್ತೆ ಎಂದು ಹೆಮ್ಮೆಯಿಂದ ಹೇಳೋಕೆ ಕಾರಣವೂ ಇದೆ. ಹಳ್ಳಿಯೊಳಗೆ ಅತ್ತೆ ಸೊಸೆ ಮಧ್ಯೆ ಜಗಳ, ಅತ್ತೆ ಬಗ್ಗೆ ಸೊಸೆ ಹೇಳೋದು ಸೊಸೆ ಬಗ್ಗೆ ಅತ್ತೆ ಹೇಳೋದು ಕಟ್ಟೆ ಮೇಲೆ ನಡೆಯುವ ಹರಟೆ ಸಂಸಾರ ಕೆಡೆಸುವ ಮಾತೆ ಹೆಚ್ಚು ಇದು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ.ಇದೊಂದು ಮುಗಿಯಲಾರದ ಕಥೆ ವ್ಯಥೆಯಾಗಿದೆ. ನನ್ನ ಬದುಕಿನಲ್ಲಿ ಬಂದಿರುವ ಅತ್ತೆ ಬಗ್ಗೆ ಹೇಳೋಕೆ ಪದಗಳಿಗೂ ಮೀರಿದ್ದು. ನಾನು ಕಾಲೇಜು ಉಪನ್ಯಾಸಕಿ ನಿತ್ಯ 40ಕಿಲೋಮೀಟರ್ ಪ್ರಯಾಣ , ಬಸ್ಸಿನಲ್ಲಿನ ಪ್ರಯಾಣ ಪ್ರಯಾಸ ಆಗಿಬಿಟ್ಟಿದೆ ಯಾಕೆಂದರೆ ಬಸ್ ನಲ್ಲಿನ ಗದ್ದಲ, ಉಚಿತ ಬಸ್ ಪ್ರಯಾಣ ಎಂಬ ಖುಷಿ ಒಂದೆಡೆಯಾದರೆ ಸೀಟು ಸಿಗದೇ ಗದ್ದಲ ಗಲಾಟೆ ಮಧ್ಯೆ ಪ್ರಯಾಣ ಪ್ರಯಾಸ ಆಗಿರುತ್ತೆ. ಇದರ ಮಧ್ಯೆಯೂ ಕವನ ,ಕಥೆ ಬರುವುದು ನನ್ನ ಹವ್ಯಾಸ. ಬೆಳಿಗ್ಗೆ ಬೇಗ ಎದ್ದು ರೆಡಿಯಾಗಿ ಬಸ್ ಹಿಡಿಯಲು ಹೋದಾಗ ಸೀಟು ಸಿಗದೇ ಇದ್ದಾಗ ಮನೆಯವರನ್ನು ವ್ಯವಸ್ಥೆ ಬಗ್ಗೆಯೂ ಕೋಪ ಬಂದಿದ್ದುಂಟು. ಸಾಕಪ್ಪಾ ಈ ಬಸ್ ಸಹವಾಸ ಅಂತ ನನ್ನ ಸ್ಕೂಟಿ ಕಿಕ್ ಹೊಡೆದು ಹತ್ತಬೇಕು ಎನ್ನುವಷ್ಟರಲ್ಲಿ ಮತ್ತೊಂದು ಬಸ್ ಬರುವುದು ನೋಡಿ ಬಸ್ ಗದ್ದಲ ಇದೆಯೋ, ಸೀಟು ಸಿಗುತ್ತಾವೋ ಏನು ಅಂ–ದುಕೊಂಡು, ಅಂದು ಬಸ್ ನಲ್ಲಿ ಕಾಲಿ ಸೀಟು ಇವೆ ಎಂದು ಸ್ಕೂಟಿ ರಸ್ತೆ ಬದಿಗೆ ನಿಲ್ಲಿಸಿ ಬಸ್ ಏರಿದೆ ಕಾಲಿ ಸೀಟು ನೋಡಿ ಆದಷ್ಟು ಖುಷಿ ಹೇಳಲಾಗದು. ಬಸ್ ನಲ್ಲಿ ಕಾಲಿ ಸೀಟು ನಲ್ಲಿ ಕಿಟಕಿ ಕಡೆಗೆ ಕುಳಿತು ನಿಸರ್ಗ ನೋಡುತ್ತಾ ಹೊರಟೆ. ನನ್ನನ್ನು ನಾ ಮರೆತು ಬಿಟ್ಟೆ ಎನ್ನುವಷ್ಟರಲ್ಲಿ ನನಗೆ ಥಟ್ಟನೆ ನೆನಪಾಗಿದ್ದು ನನ್ನತ್ತೆ...

ಆಗ ಏಕೋ ನನ್ನ ಮನದಲ್ಲಿ ಬೇಜಾರು ,, ಬೆಳಿಗ್ಗೆ ಎದ್ದು ರೆಡಿಯಾಗಿ ಸಮಯ ಆಗಿದೆ ಅಂತ ಹಾಗೆಯೇ ಬಂದುಬಿಟ್ಟೆ, ನನ್ನಪುಟ್ಟಮಗಳು ರಾತ್ರಿ ನಾಲ್ಕೈದು ಬಾರಿ ಅಳುತ್ತಾ ಎದ್ದಿದ್ದರೆ ಸಮಾಧಾನ ಮಾಡಿದ್ದು ನನ್ನತ್ತೆ, ರಾತ್ರಿ ನಿದ್ದೆಯಿಲ್ಲದಿದ್ದರೂ ಬೆಳಿಗ್ಗೆ ನಗುನಗುತ್ತಾ ನಾ ಹೋಗುವಾಗ ನನ್ನ ಕೈಗಿ ಬಿಸಿ ಬಿಸಿ ಅಡುಗೆಯ ಡಬ್ಬಿ ಇಟ್ಟಳು.ಹಾಗೆಯೇ ತೆಗೊಂಡು ಬಂದೆ ಎಂದು ಮನಸ್ಸಿನಲ್ಲಿ ಇನ್ನಿಲ್ಲದ ಬೇಜಾರು, ಹತಾಶೆ, ಹೌದು ನನ್ನತ್ತೆ ನನ್ನ ಮಕ್ಕಳನ್ನು ನೋಡಿಕೊಂಡು ಆರು ಜನರಿಗೆ ಅಡುಗೆ ಮಾಡ್ತಾಳೆ.ಅವರ ಕೆಲ್ಸ ನೋಡಿ ನನಗೆ ಪಾಪ ಎನ್ನಿಸಿತು.ಆದರೂನಾನುಹೊರಗಡೆಕೆಲಸಮಾಡುತ್ತಿದ್ದೇನೆ ಎನ್ನುವ ಬಗ್ಗೆ ಅಭಿಮಾನ ನನ್ನತ್ತೆಯ ತ್ಯಾಗದಿಂದ ಎನ್ನುವ ಸಮಾಧಾನದ ನಿಟ್ಟುಸಿರು. ನಾನು ಯಾವುದೋ ಕಾರ್ಯಕ್ರಮಕ್ಕೆ ಹೋದಾಗ ಕಾಲೇಜಿನಲ್ಲಿ ಸಿಗುವ ಗೌರವ ಸನ್ಮಾನ ಇವೆಲ್ಲವೂ ನನ್ನತ್ತೆಗೆ ಸಲ್ಲಬೇಕು.ಯಾಕಂದರೆ ನನ್ನತ್ತೆ ತ್ಯಾಗ ,ಸಂಯಮ, ನಂಬಿಕೆ ಇದಕ್ಕೆಲ್ಲಾ ಕಾರಣ.ನನ್ನತ್ತೆ ನನ್ನೊಂದಿಗೆ ಒಂದಿನಾನೂ ಜಗಳವಾಡಿದವಳಲ್ಲ, ನನಗೆ ಅದು ಬೇಕು ಇದು ಬೇಕು, ಎಲ್ಲಾ ಕೆಲಸ ನಾನೇ ಮಾಡಬೇಕಾ, ಕಾಡುವ ಮೊಮ್ಮಕ್ಕಳೊಂದಿಗೆ ಹೇಗೆ ನೋಡಿಕೊಳ್ಳಲಿ ಎನ್ನಲಿಲ್ಲ ಸೊಸೆಗೆ ಕಾಟ ಕೊಡಲಿಲ್ಲ. ನೆರೆಹೊರೆಯವರ ಚಾಡಿ ಮಾತಿಗೆ ಜೋತು ಬಿದ್ದವಳಲ್ಲ ನನ್ನತ್ತೆ. ನನ್ನ ಎರಡು ಮಕ್ಕಳನ್ನು ನೋಡಿಕೊಳ್ಳುತ್ತಾ ತಾನಾಯ್ತು ತನ್ನ ಕೆಲ್ಸಾಯ್ತು ಅಂತ ಇರುವವಳು ನನ್ನತ್ತೆ. ಬೇಸರವಾಯ್ತು ಅಂತ ನೆರೆಹೊರೆಯವರೊಂದಿಗೆ ಕಟ್ಟೆ ಮೇಲೆ ಕುಳಿತು ಹರಟೆ ಹೊಡೆಯುವವಳಲ್ಲ ನನ್ನತ್ತೆ. ನಾನು ಕಾಲೇಜು ಮುಗಿಸಿ ಮನೆಗೆ ಬರುವಷ್ಟರಲ್ಲಿ ನನಗೆ ನನ್ನ ಮಕ್ಕಳಿಗೆ ಬಿಸಿಬಿಸಿಯಾದ ಖಾದ್ಯ ತಯಾರಿಸಿಟ್ಟುಕೊಂಡಿರುತ್ತಾಳೆ. ಎರಡು ವರ್ಷದ ಮಗುವನ್ನು ನೋಡಿಕೊಳ್ಳುವುದು ಸುಲಭದಲ್ಲ,ಆ ಕೆಲಸ ದೇವರಿಗೆಗೊತ್ತು. ಬೆಳಿಗ್ಗೆ ಬೇಗ ಎದ್ದು ವಾಕಿಂಗ್ ಹೋಗು ಎನ್ನುತ್ತಾಳೆ . ಜೊತೆಗೆ ಮೊಮ್ಮಕ್ಕಳು ಕೂಡಾ ನಮ್ಮಜ್ಜಿ ದೇವರಿದಂತೆ.ನಮ್ಮ ಯಜಮಾನರು ಬೆಳಿಗ್ಗೆ ಡ್ಯೂಟಿ ಹೋಗ್ತಾರೆ. ಕಾಲೇಜಿನಲ್ಲಿ ಗೌಡಶ್ಯಾನಿ ಡಬ್ಬಿ ಕಟ್ಟಿಕೊಂಡು ಬಂದಿದ್ದು ನೋಡಿ ಗೇಲಿ ಮಾಡಿದಾಗೊಮ್ಮೆ ಮುಗುಳ್ನಕ್ಕು ಸುಮ್ಮನಾಗುತ್ತೇನೆ.ನನಗೊಮ್ಮೆ ಅನ್ನಿಸುತ್ತದೆ ನಾನು ಅತ್ತೆಯನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು. ಆದ್ರೆ ನನ್ನತ್ತೆ ನಮ್ಮನ್ನೆಲ್ಲ ಚೆನ್ನಾಗಿ ನೋಡಿಕೊಳ್ಳುತ್ತಿರುವುದು ಎಲ್ಲರಿಗೂ ಗೊತ್ತಿರೋ ವಿಚಾರ. ಎಲ್ಲಾ ವಿಚಾರಗಳಲ್ಲಿ ನನ್ನತ್ತೆಯನ್ನು ಹೇಮರೆಡ್ಡಿ ಮಲ್ಲಮ್ಮಳಿಗೆ ಹೋಲಿಸಿದರೂ ಅತಿಶಯೋಕ್ತಿಯಲ್ಲ. ಸೊಸೆಯಂದಿರು ಅತ್ತಿಗೆಯರನ್ನು ತಾಯಿಯಂತೆ ನೋಡಿಕೊಂಡರೆ ಅತ್ತೆಯೂ ಸೊಸೆಯನ್ನು ಮಗಳಂತೆ ನೋಡುತ್ತಾರೆ.ಹಿರಿಯ ಜೀವಿಗಳನ್ನು ಗೌರವದಿಂದ ನೋಡಿಕೊಳ್ಳಬೇಕು ಅಂ–ದಾಗ ನನ್ನತ್ತೆಯಂತವರು ನಿಮಗೂ ಸಿಗುತ್ತಾರೆ.ಇತ್ತೀಚಿನ ಧಾರಾವಾಹಿಗಳಲ್ಲಿ ಅತ್ತೆ ಸೊಸೆ ಮಧ್ಯೆ ಜಗಳ ಆಡೋದು ತೋರಿಸುತ್ತಾರೆ. ಅತ್ತೆ ಅಂದರೆ ಗರ್ವ, ದರ್ಪ, ಅಹಂಕಾರದ ರೂಪದಲ್ಲಿ ಬಿಂಬಿಸುತ್ತಾರೆ. ಎಲ್ಲಾ ಅತ್ತೆಯಂದಿರು ಹೀಗೆ ಇರುವುದಿಲ್ಲ ಬದಲಾಗಿ ನನ್ನತ್ತೆಯಂತೆಯೂ ಇರುತ್ತಾರೆ. ಇದು ಧಾರಾವಾಹಿ ನಿರ್ದೇಶಕರಿಗೆ ಅಂತ:ಕರಣದ ಅತ್ತೆ ಬಗ್ಗೆಯೂ ತಿಳಿದುಕೊಳ್ಳಬೇಕು, ತೋರಿಸಬೇಕು ಎನ್ನುವುದು ನನ್ನ ಅಭಿಲಾಷೆ...

* * *

**ಲೇಖಕಿ :**

**ಶ್ರೀಮತಿ ಅನಿತಾ ಆರ್ ಪಾಟೀಲ್ ,**

**ಉಪನ್ಯಾಸಕಿ. ಆರ್ಎಂಜಿ ಪಿಯು ಕಾಲೇಜು**

**ಮುಧೋಳ**

## ಸದ್ಭಾವನಾ ದಿನ: ಪ್ರತಿಜ್ಞಾವಿಧಿ ಬೋಧನೆ



**ಬಾಗಲಕೋಟೆ :** ಪ್ರತಿ ವರ್ಷದಂತೆ ಈ ವರ್ಷವೂ ಸದ್ಭಾವನಾ ದಿನದ ಅಂಗವಾಗಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಜಿಲ್ಲಾಧಿಕಾರಿ ಸಂಗಪ್ಪ ಅವರ ನೇತೃತ್ವದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಪ್ರತಿಜ್ಞಾವಿಧಿ ಬೋಧಿಸಿದರು.

ಜಾತಿ, ಧರ್ಮ, ಪ್ರದೇಶ, ಮತ ಅಥ–ವಾ ಭಾಷೆಯ ಬೇಧಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯನಿರ್ವಹಿಸುತ್ತೇನೆ ಎಂದು ಪ್ರತಿಜ್ಞೆ ಮಾಡಲಾಯಿತು.ಅಲ್ಲದೇವೈಯಕ್ತಿಕವಾಗಿಯಾಗಲೀ, ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಬೇಧಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೇ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕಪರಿಹರಿಸುತ್ತೇನೆಂದುಸಹಮಾಡಲಾಯಿತು. ಪ್ರತಿಜ್ಞಾವಿಧಿಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

# ಗಣೇಶೋತ್ಸವ, ಈದ್ ಮಿಲಾದ್ | ಸೌಹಾರ್ದಯುತ ಆಚರಣೆ ಮಾದರಿಯಾಗಲಿ: ತಹಶೀಲ್ದಾರ್ ಸಲಹೆ



**ಕುಷ್ಟಗಿ :** 'ಗಣೇಶೋತ್ಸವ ಹಾಗೂ ಈದ್ ಮಿಲಾದ್ ಅನ್ನು ಶಾಂತಿ ಮತ್ತು ಸೌಹಾರ್ದದಿಂದ ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಇತರರಿಗೆ ಮಾದರಿಯಾಗಬೇಕು' ಎಂದು ತಹಶೀಲ್ದಾರ್ ಅಶೋಕ ಶಿಗ್ಗಾಂವಿ ಹೇಳಿದರು.

ಗಣೇಶೋತ್ಸವ ಮತ್ತು ಈದ್ ಮಿಲಾದ್ ಆಚರಣೆಗೆ ಸಂಬಂಧಿಸಿದಂತೆ ಪಟ್ಟಣದ ಪೊಲೀಸ್ ಠಾಣೆ ವ್ಯಾಪ್ತಿಯ ಗಣೇಶೋತ್ಸವ ಸಮಿತಿಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿ, ವಿವಿಧ ಸಂಘಟನೆಗಳ ಪ್ರಮುಖರು ಹಾಗೂ ಸಾರ್ವಜನಿಕರೊಂದಿಗೆ ನಡೆಸಿದ ಶಾಂತಿ ಸಮಾಲೋಚನೆ ಸಭೆಯಲ್ಲಿ ಮಾತನಾಡಿದರು.

ಹಬ್ಬ ಎಲ್ಲ ಮನಗಳನ್ನು ಮುದಗೊಳಿಸುವಂತಿರಬೇಕೆ ಹೊರತು ಇತರರಿಗೆ ಕಿರಿಕಿರಿ ಅಥವಾ ತೊಂದರೆ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಉಂಟು ಮಾಡುವಂತಿದ್ದರೆ ಹಬ್ಬಗಳು ಅರ್ಥಹೀನ ಎನಿಸುತ್ತವೆ. ಯಾವುದೇ ಸಮುದಾಯಗಳ ಆಚರಣೆಯಲ್ಲಿ ವಿಜೃಂಭಣೆ ಇರಲಿ ಹುಮ್ಮಸ್ಸಿನಲ್ಲಿ ಅವಘಡಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು. ಸರ್ಕಾರದ ಕಾನೂನುಗಳನ್ನು ಗೌರವಿಸಬೇಕು' ಎಂದರು.

ಸರ್ಕಲ್ ಇನ್‌ಸ್ಪೆಕ್ಟರ್ ಯಶವಂತ ಬಿಸನಳ್ಳಿ ಮಾತನಾಡಿ,'ಯಾವುದೇ ಮೆರವಣಿಗೆ, ಆಚರಣೆಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ ಧ್ವನಿವರ್ಧಕಗಳು ನಿಗದಿತ ಡೆಸಿಬಲ್‌ದಲ್ಲಿ ಇರುವುದು ಕಡ್ಡಾಯ. ಡಿಜೆಗಳನ್ನು ಬಳಸುವುದಕ್ಕೆ ಅವಕಾಶವೇ ಇಲ್ಲ. ಅದನ್ನು ಬಳಸಿದ ಕಡೆ ಕೆಲವರಿಗೆ ಹೃದಯ ಸ್ತಂಭನ ಆಗಿರುವ ಉದಾಹರಣೆಳಿವೆ. ಇಷ್ಟಾದರೂ ಕಾನೂನು ಮೀರಿದರೆ ಕ್ರಮ ಕೈಗೊಳ್ಳುವುದು ನಮಗೂ ಅನಿವಾರ್ಯವಾಗುತ್ತದೆ' ಎಂದು ಹೇಳಿದರು.

ಅದೇ ರೀತಿ ಸಂಬಂಧವಿಲ್ಲದ ವಿಚಾರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬೇಡಿ. ಏನೇ ಸಮಸ್ಯೆಗಳಿದ್ದರೂ ಸ್ಥಳೀಯವಾಗಿಯೇ ಬಗೆಹರಿಸಿಕೊಳ್ಳೋಣ. ರಾತ್ರಿ 10 ಗಂಟೆ ನಂತರ ಯಾವುದೇ ಧ್ವನಿವರ್ಧಕ ಬಳಸುವಂತಿಲ್ಲ. ಗಣೇಶ ಮೂರ್ತಿಗಳ ವಿಸರ್ಜನೆ ಸ್ಥಳಗಳಲ್ಲಿ ಮಕ್ಕಳ ಬಗ್ಗೆ ಸಂಘಟಕರು ಕಾಳಜಿ ವಹಿಸಬೇಕು. ಮೆರವಣಿಗೆ ಸಾಗುವ ರಸ್ತೆಗಳಲ್ಲಿ ಬೀದಿದೀಪ,
ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿಗೆ ಹೇಳಿದರು.

ಮಲ್ಲಿಕಾರ್ಜುನ ಗುಗ್ಗರಿ,
ನಜೀರಸಾಬ್ ಮೂಲಿಮನಿ, ತಾಲ್ಲೂಕು ಮುಸ್ಲಿಂ ಪಂಚ ಸಮಿತಿ ಅಧ್ಯಕ್ಷ ಅಹ್ಮದ್ ಹುಸೇನ್ ಆದೋನಿ, ಮಂಜುನಾಥ ನಾಲಗಾರ ಹಾಗೂ ಇತರರು ಮಾತನಾಡಿದರು.

ಪುರಸಭೆ ಅಧ್ಯಕ್ಷ ಮಹಾಂತೇಶ ಕಲಭಾವಿ, ಮುಖ್ಯಾಧಿಕಾರಿ ವೆಂಕಟೇಶ ಬೀಳಗಿ,
ಸಬ್ ಇನ್‌ಸ್ಪೆಕ್ಟರ್‌ಗಳಾದ ಹನುಮಂತಪ್ಪ ತಳವಾರ, ಪುಂಡಪ್ಪ ಜಾಧವ ಹಾಗೂ ಇತರರು ಇದ್ದರು.

ಪೊಲೀಸ್ ಸಿಬ್ಬಂದಿ ತಾಯಪ್ಪ, ಪರಸಪ್ಪ, ಶ್ರೀಧರ ದೇಶಪಾಂಡೆ,
ಪರಶುರಾಮ ಸೇರಿದಂತೆ ಗಣೇಶೋತ್ಸವ ಸಮಿತಿ ಪ್ರಮುಖರು, ಸಾರ್ವಜನಿಕರು, ವಿವಿಧ ಸಂಘಟನೆಗಳ ಮುಖಂಡರು ಶಾಂತಿಸಭೆಯಲ್ಲಿಹಾಜರಿದ್ದರು.ಬಸವರಾಜ ಅಂಬಾಡಿ ನಿರೂಪಿಸಿದರು.

# ಗಣೇಶೋತ್ಸವ, ಈದ್ ಮಿಲಾದ್ | ದುರ್ಘಟನೆ ನಡೆದರೆ ಸಂಘಟಕರೇ ಹೊಣೆ: ಖಡಕ ಎಚ್ಚರಿಕೆ



**ಕೊಪ್ಪಳ :** 'ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬಗಳನ್ನು ಸೌಹಾರ್ದದಿಂದ ಆಚರಿಸಬೇಕು. ಹಬ್ಬಗಳ ವೇಳೆ ಅಹಿತಕರ ಘಟನೆ ನಡೆದರೆ ಸಂಘಟಕರನ್ನೇ ಹೊಣೆ ಮಾಡಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ಧಿ ಸೂಚನೆ ನೀಡಿದರು.

ನಗರ ವ್ಯಾಪ್ತಿಯಲ್ಲಿ ಹಿಂದೂ ಹಾಗೂ ಮುಸ್ಲಿಂ ಸಮಾಜದಮುಖಂಡರಜೊತೆಬುಧವಾರಶಾಂತಿಸಭೆ ನಡೆಸಿದ ಅವರು,'ಗಣೇಶ ಮೂರ್ತಿ ಪ್ರತಿಷ್ಠಾಪನೆಯ ಒಂಬತ್ತನೇ ದಿನದಂದೇ (ಸೆ.4) ಈದ್ ಮಿಲಾದ್ ಇದ್ದು, ಅಂದು ಮೆರವಣಿಗೆಗೆ ಅವಕಾಶವಿಲ್ಲ. ಗಣೇಶ ಪ್ರತಿಷ್ಠಾಪಿಸುವ ಸಂಘಟಕರು ವಿಸರ್ಜನೆಯ ಸಮಯದಲ್ಲಿ ಮಾರ್ಗ ಮಧ್ಯದಲ್ಲಿಯೇ ನಿಲ್ಲಿಸಿ ಹೋದರೆ ಉಳಿದವರಿಗೂ ತೊಂದರೆಯಾಗುತ್ತದೆ. ಇದಕ್ಕೆ ಯಾರೂ ಅವಕಾಶ ಮಾಡಿಕೊಡಬಾರದು' ಎಂದರು.

ಸಂಘಟಕರು ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಅನುಮತಿ ಪಡೆಯಲು ಏಕಗವಾಕ್ಷಿ ವ್ಯವಸ್ಥೆ ಮಾಡಲಾಗುತ್ತದೆ. ಕಳೆದ ವರ್ಷ ಗಲಾಟೆಯಾದ ಕಾರಣಕ್ಕೆ ಒಂದು ಸಂಘಟನೆಗೆ ಗಣಪತಿ ಕೂಡಿಸಲು ಅನುಮತಿ ಕೊಡಬೇಡಿ ಎಂದು ತಹಶೀಲ್ದಾರ್‌ಗೆ ಪತ್ರ ಬರೆದಿದ್ದೇವೆ' ಎಂದು ತಿಳಿಸಿದರು.

ನಗರಸಭೆ ಪೌರಾಯುಕ್ತ ಸುರೇಶ ಬಬಲಾದಿ, ಭಾಗ್ಯನಗರ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಹೊನ್ನೂರಸಾಬ್‌ಬೈರಾಪುರ,ನಗರಸಭೆಸದಸ್ಯಅಕ್ಬರ್ ಪಾಷಾ ಪಲ್ಟನ್,ಸೈಬರ್‌ಕ್ರೈಂಡಿವೈಎಸ್‌ಪಿಯಶವಂತ ಕುಮಾರ್, ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಯೂನಸ್, ನಗರ ಪೊಲೀಸ್ ಠಾಣೆ ಪಿಐ ಜಯಪ್ರಕಾಶ್ ಮತ್ತು ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಎಂ.ಕೆ.ಸವಣೂರ್ ಪಾಲ್ಗೊಂಡಿದ್ದರು.

# ಯೂರಿಯಾ ಚೀಟಿಗಾಗಿ ರೈತರ ದುಂಬಾಲು




**ಕೊಪ್ಪಳ:**ಎರಡ್ಮೂರುದಿನಗಳಿಂದತಾಲ್ಲೂಕು ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದ್ದರಿಂದ ಯೂರಿಯಾ ರಸಗೊಬ್ಬರಕ್ಕೆ ಮತ್ತೆ ವ್ಯಾಪಕ ಬೇಡಿಕೆ ವ್ಯಕ್ತವಾಗಿದ್ದು, ಬುಧವಾರ ಇಲ್ಲಿನ ಬಸವೇಶ್ವರ ವೃತ್ತದ ಬಳಿಯ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಸಹಕಾರ ಸಂಘದ ಮುಂಭಾಗದಲ್ಲಿ ಚೀಟಿ ಪಡೆದುಕೊಳ್ಳಲು ರೈತರು ದುಂಬಾಲು ಬಿದ್ದರು.

ಮಳೆಯಾದಾಗಲೆಲ್ಲ ರಸಗೊಬ್ಬರಕ್ಕೆ ಸಾಕಷ್ಟು ಬೇಡಿಕೆ ಬರುತ್ತದೆ.

ಜಿಲ್ಲೆಗೆ ಅಗತ್ಯವಿರುವಷ್ಟು ಯೂರಿಯಾ ಬರುತ್ತಿದ್ದರೂ ಬೇಡಿಕೆ ಮಾತ್ರ ಕಡಿಮೆಯಾಗುತ್ತಿಲ್ಲ. ಮುಂಗಾರು ಹಂಗಾಮಿನಲ್ಲಿ ಸೆಪ್ಟೆಂಬರ್ ತನಕ ಜಿಲ್ಲೆಗೆ ಒಟ್ಟು 51 ಸಾವಿರ ಮೆಟ್ರಿಕ್ ಟನ್ ಬೇಡಿಕೆಯಿದ್ದು, ಇದುವರೆಗೂ 42 ಸಾವಿರ ಮೆಟ್ರಿಕ್ ಟನ್ ಬಂದಿದೆ. ಬುಧವಾರ 43 ಟನ್ ಬಂದಿದ್ದು, ಇದನ್ನು ಗುರುವಾರ ಹಂಚಲಾಗುತ್ತದೆ. ಅದಕ್ಕೆ ಮುನ್ನಾದಿನ ಚೀಟಿ ನೀಡಲಾಯಿತು.

ಕೃಷಿ ಇಲಾಖೆ ಒಟ್ಟು ಒಂದು ಸಾವಿರ ಜನರಿಗೆ ರಸಗೊಬ್ಬರ ಚೀಟಿ ಕೊಡಲು ಯೋಜನೆ ರೂಪಿಸಿಕೊಂಡಿತ್ತು. ಬೆಳಗಿನ ಜಾವದಿಂದಲೇ ಸರತಿಯಲ್ಲಿ ಚೀಟಿ ಪಡೆಯಲು ರೈತರು ನಿಂತಿದ್ದರಿಂದ ಇಲಾಖೆ 1,500 ಚೀಟಿಗಳನ್ನು ನೀಡಲು ಮುಂದಾದರೂ ರೈತರ ನೂಕಾಟ?ತಳ್ಳಾಟ ಮಾತ್ರ ಕಡಿಮೆಯಾಗಲಿಲ್ಲ.

ಹಲವು ತಾಸು ಸರತಿಯಲ್ಲಿ ನಿಂತರೂ ರಸಗೊಬ್ಬರಕ್ಕೆ ಚೀಟಿ ಸಿಕ್ಕಿಲ್ಲ' ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ತಾಲ್ಲೂಕು ವ್ಯಾಪ್ತಿಯಲ್ಲಿ ಹಲವು ಸೊಸೈಟಿಗಳಿಗೆ ನೇರವಾಗಿ ಯೂರಿಯಾ ನೀಡುತ್ತಿದ್ದರೂ ಅನೇಕ ರೈತರು ಜಿಲ್ಲಾ ಕೇಂದ್ರಕ್ಕೆ ಬಂದಿದ್ದರು. ಇನ್ನೂ ಕೆಲವು ರೈತರು,'ನಮ್ಮೂರಿನ ಸೊಸೈಟಿಯಲ್ಲಿ ಗೊಬ್ಬರ ಸಿಕ್ಕರೆ ಇಲ್ಲಿಗೆ ಬಂದು
ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ಕಾಯುವ ಅಗತ್ಯವೇನಿದೆ' ಎಂದು ಪ್ರಶ್ನಿಸಿದರು.

ಎಸ್.ಪಿ. ಮೊಕ್ಕಾಂ: ಪರಿಸ್ಥಿತಿ ಕೈ ಮೀರುತ್ತಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಿ ಶಿಸ್ತುಬದ್ಧವಾಗಿ
ರಸಗೊಬ್ಬರ ವಿತರಣೆಗೆ ಬ್ಯಾರಿಕೇಡ್‌ಗಳನ್ನು ಅಳವಡಿಸಿದರೂ ರೈತರು ಕೇಳಲಿಲ್ಲ.

ಎಸ್.ಪಿ ಡಾ.ರಾಮ್ ಎಲ್. ಅರಸಿದ್ಧಿ ಹಾಗೂ ಇತರ ಅಧಿಕಾರಿಗಳು,'ಎಲ್ಲರಿಗೂ ಚೀಟಿ ಸಿಗುತ್ತದೆ. ತಾಳ್ಮೆಯಿಂದ ಕಾಯಬೇಕು' ಎಂದುಮನವಿಮಾಡಿದರೂಕಿವಿಗೊಡಲಿಲ್ಲ. ಬಳಿಕ ಬಂದೋಬಸ್ತ್‌ಗೆ ಮತ್ತಷ್ಟು ಪೊಲೀಸರನ್ನುನಿಯೋಜಿಸಿಪರಿಸ್ಥಿತಿಯನ್ನು ತಹಬಂದಿಗೆ ತಂದರು.

# ದೇವರಾಜ ಅರಸು ಜನ್ಮ ದಿನ | ಜನರ ಏಳಿಗೆಗಾಗಿ ಶ್ರಮಿಸಿದ ಮಹನೀಯ: ರೆಡ್ಡಿ ಶ್ರೀನಿವಾಸ



**ಕೊಪ್ಪಳ :** 'ಡಿ.ದೇವರಾಜ ಅರಸು ಅವರು ಬಡ ಹಾಗೂ ಹಿಂದುಳಿದ ವರ್ಗಗಳ ಜನರ ಏಳಿಗೆಗಾಗಿ ಶ್ರಮಿಸಿದ್ದರು' ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ಸಂಯುಕ್ತ ಆಶ್ರಯದಲ್ಲಿ ಸಾಹಿತ್ಯ ಭವನದಲ್ಲಿ ಬುಧವಾರ ನಡೆದ ದೇವರಾಜ ಅರಸು ಅವರ 110ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ,'ಅರಸು ಅವರನ್ನು ಇಂದು ಸ್ಮರಿಸುವುದರ ಜೊತೆಗೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯೋಣ' ಎಂದರು.

ಅಧ್ಯಕ್ಷತೆ ವಹಿಸಿದ್ದ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರು ಮಾತನಾಡಿ,'ಕೆಲವರಿಗೆ 400ರಿಂದ 500 ಎಕರೆ ಜಮೀನು ಇದ್ದರೆ ಇನ್ನೂ ಕೆಲವು ಜನರಿಗೆ ಜಮೀನು ಇರಲಿಲ್ಲ. ಹಾಗಾಗಿ ಎಲ್ಲರಿಗೂ ಭೂಮಿ ಸಮಾನವಾಗಿ ಹಂಚಿಕೆಯಾಗಬೇಕು ಎನ್ನುವ ಉದ್ದೇಶದಿಂದ ದೇವರಾಜ ಅರಸರು ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ಜಾರಿಗೆ ತಂದ ಧೀಮಂತ ನಾಯಕರು' ಎಂದರು.

ಡಿವೈಎಸ್‌ಪಿ ಯಶವಂತಕುಮಾರ, ಕೊಪ್ಪಳ ತಹಶೀಲ್ದಾರ್ ವಿಠ್ಠಲ ಚೌಗುಲಾ, ಪ್ರಾಚಾರ್ಯ ಮಂಜುನಾಥ, ಸಿದ್ದಲಿಂಗಪ್ಪ, ಚನ್ನಪ್ಪ ಹಂಚಿ, ಕೊಪ್ಪಳ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ನಾಗರತ್ನ, ತಾ.ಪಂ. ಇಒ ದುಂಡಪ್ಪ ತುರಾದಿ, ವಾರ್ತಾಧಿಕಾರಿ ಸುರೇಶ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕೆ ಸಾಲ ಕೊಡಿಸಿ: ಗುರುಲಿಂಗಪ್ಪ ಅಂಗಡಿ



**ವಿಜಯಪುರ :** 'ಕೇಂದ್ರ ಸರ್ಕಾರ ಸಹಕಾರ ಸಕ್ಕರೆ ಕಾರ್ಖಾನೆಗಳ ಪುನಶ್ಚೇತನಕ್ಕೆ ಯೋಜನೆ ರೂಪಿಸಿ, ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡುತ್ತಿದೆ. ಆದರೆ, ರಾಜ್ಯ ಸರ್ಕಾರದ ಮೊಂಡುತನದಿಂದ ರಾಜ್ಯದ ಸಹಕಾರಸಕ್ಕರೆಕಾರ್ಖಾನೆಗಳುಇದರ ಸದುಪಯೋಗ ಪಡೆದುಕೊಳ್ಳುತ್ತಿಲ್ಲ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಗುರುಲಿಂಗಪ್ಪ ಅಂಗಡಿ ಆರೋಪಿಸಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಗಳು ಸಂಕಷ್ಟದಲ್ಲಿವೆ. ಇವುಗಳಿಗೆ ಕೇಂದ್ರ ಸರ್ಕಾರ ನೀಡುವ ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯ ಸಿಕ್ಕರೆ ಸಹಕಾರಿಯಾಗಲಿದೆ. ಇದಕ್ಕೆ ರಾಜ್ಯ ಸರ್ಕಾರ ಅವಕಾಶ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

ನೆರೆಯ ಮಹಾರಾಷ್ಟ್ರ ಸರ್ಕಾರವು ಕೇಂದ್ರದ ಕಡಿಮೆ ಬಡ್ಡಿದರದ ಸಾಲ ಸೌಲಭ್ಯ ಯೋಜನೆಯನ್ನು ಸದುಪಯೋಗ ಪಡಿಸಿಕೊಂಡಿದ್ದು, ಸುಮಾರು 4 ಸಾವಿರಕೋಟಿಗೂಅಧಿಕಸಾಲಅಲ್ಲಿಯಸಹಕಾರಸಕ್ಕರೆ ಕಾರ್ಖಾನೆಗಳು ಪಡೆದುಕೊಂಡು, ಪುನಶ್ಚೇತನಗೊಂಡಿವೆ' ಎಂದರು.

ಜಿಲ್ಲೆಯಲ್ಲಿ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ, ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರದ ಯೋಜನೆಯಿಂದ ಅನುಕೂಲವಾಗಿವೆ. ಈ ನಿಟ್ಟಿನಲ್ಲಿ ಜಿಲ್ಲಾಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ಸಕ್ಕರೆ ಸಹಕಾರಿ ಸಚಿವ ಶಿವಾನಂದ ಪಾಟೀಲ ಹಾಗೂ ಶಾಸಕ ಯಶವಂತ ರಾಯಗೌಡ ಪಾಟೀಲ, ನೆರೆಯ ಬೀಳಗಿ ಶಾಸಕ ಜೆ.ಟಿ.ಪಾಟೀಲ ಅವರು ರಾಜ್ಯ ಸರ್ಕಾರದ ಮೇಲೆ ಒತ್ತಡ ಹಾಕಬೇಕು. ಕೇಂದ್ರದ ಸಾಲದ ನೆರವು ಪಡೆಯಲು ಅನುಕೂಲ ಮಾಡಬೇಕು. ಇಲ್ಲವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ನಂದಿ ಸಹಕಾರ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಕುಮಾರ ದೇಸಾಯಿ ಅವರು ಕೇಂದ್ರ ಸರ್ಕಾರ ನೀಡುವ ಕಡಿಮೆ ಬಡ್ಡಿದರದ ಸಾಲ ಸೌಲಭ್ಯ ದೊರಕಿಸಿಕೊಡುವಂತೆ ಜಿಲ್ಲೆಯ ಸಚಿವರು, ಶಾಸಕರ ಮೇಲೆ ಒತ್ತಡ ಹೇರಬೇಕು' ಎಂದರು.

# ಇಮ್ತಿಯಾಜ್ ಹೆಬ್ಬಾಳ ರೈತ ಸಂಘದಿಂದ ಸನ್ಮಾನ




**ವಿಜಯಪುರ :** ಜಿಲ್ಲೆಯ ನಿಡಗುಂದಿ ತಾಲೂಕಿನ ಗೊಳಸಂಗಿ ಗ್ರಾಮದ ಯುವ ನಾಯಕರಾದ ಇಮ್ತಿಯಾಜ್ ಹೆಬ್ಬಾಳ ಅವರಿಗೆ ಕರುನಾಡು ಸಾಹಿತ್ಯ ಪರಿಷತ್ತು ಹಾಗೂ ಸರ್ವೋದಯ ಸೌಹಾರ್ದ ವೇದಿಕೆ ವತಿಯಿಂದ ಸ್ವಾತಂತ್ರೋತ್ಸವದ ನಿಮಿತ್ಯ ಹಮ್ಮಿಕೊಂಡಿರುವ ಕವಿಗೋಷ್ಠಿ ಹಾಗೂ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇವರಿಗೆ ಹೆಮ್ಮೆಯ ಸಂಘಟಕ ಪ್ರಶಸ್ತಿ ನೀಡಿ ಗೌರವಿಸಿರುವ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳು ಸನ್ಮಾನಿಸಿ ಶುಭ ಕೊರಿದರು.

ಹಿರಿಯ ರೈತ ಮುಖಂಡರಾದ ಬಾಬುಸಾಬ ಬೀಳಿಗಿ ಮಾತನಾಡುತ್ತಾ ಇಮ್ತಿಯಾಜ್ ಹೆಬ್ಬಾಳ ಅವರು ತಮ್ಮ ಚಿಕ್ಕ ವಯಸ್ಸಿನಿಂದ ವಿವಿಧ ಕನ್ನಡಪರ, ರೈತಪರ, ಕಾರ್ಮಿಕಪರ, ಮಹಿಳಾಪರ, ವಿದ್ಯಾರ್ಥಿಪರ ಸೇರಿದಂತೆ ಎ.ಐ.ಸಿ.ಸಿ ಮಾನವ ಹಕ್ಕು ಸಮಿತಿ ಮಾತ್ರವಲ್ಲದೇ ಹತ್ತು ಹಲವಾರು ಸಂಘಟನೆಗಳಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ
ಸಕ್ರೀಯವಾಗಿ ಮುಂದೆನಿಂತು ಹೋರಾಟ ಮಾಡಿ ನಾಡು–ನುಡಿ ಸಂರಕ್ಷಣೆ ಮಾತ್ರವಲ್ಲದೇ ಅನ್ಯಾಯಕ್ಕೊಳಗಾದ ಸಾವಿರಾರುಬಡವರು,ತುಳಿಕ್ಕೊಳಗಾದವರು ನಿರ್ಗತೀಕರಿಗೆ ಯಾವುದೇ ಜಾತಿ ಮತ ನೋಡದೇ ಸಹಾಯ ಮಾಡಿರುವುದು ಇವರ ವೈಶಿಷ್ಠವಾಗಿದೆ ಎಂದರು.

ಸಿಂಧೂರ ಚಲವಾದಿ ಮಾತನಾಡಿ ಈ ನಾಡಿನಲ್ಲಿ ದೇಶದ ಬಗ್ಗೆ ಜಾತ್ಯಾತೀತದ ಬಗ್ಗೆ ಸೌಹಾರ್ದತೆಯ ಬಗ್ಗೆ ವಿಶೇಷ ಕಾಳಜಿ ಇರುವ ಇಮ್ತಿಯಾಜ್ ಹೆಬ್ಬಾಳ ಅವರು ಗೊಳಸಂಗಿ ಸೇರಿದಂತೆ ನಿಡಗುಂದಿ ತಾಲೂಕು ಮಾತ್ರವಲ್ಲದೇ ವಿಜಯಪುರ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಅವರದೇ ಆದ ಸ್ನೇಹಿತರ ಬಳಗವನ್ನು ಹೊಂದಿ ಈ ದೇಶದ ಅಭಿವೃದ್ಧಿಗೆ ಹಲವಾರು ರೀತಿ ಸೇವೆ ಸಲ್ಲಿಸುತ್ತಾ ಬಂದಿರುವ ಇವರಿಗೆ ಇಂದು ನಮ್ಮ
ರೈತ ಸಂಘದಿಂದ ಸನ್ಮಾನಿಸಿ ಗೌರವಿಸುತ್ತಾ ಮುಂದೆಯೂ ಇದೇ ರೀತಿ ಸಮಾಜ ಕಟ್ಟುವ ಕೆಲಸದಲ್ಲಿ ಮುಂಚುಣಿಯಲ್ಲಿದ್ದು ನಿಮ್ಮ ಸಾಧನೆಯ ದಾರಿ ಬಹುದೂರ ಹೋಗಲಿ ಎಂದು ಹಾರೈಸುತ್ತೆವೆ ಎಂದರು.

ಈ ವೇಳೆ ಮಶಾಕ ಕಮತಗಿ, ರಾಜೇಸಾಬ ಹತ್ತರಕಿಹಾಳ, ಅಬ್ದುಲ್ ಬಿಜಾಪುರ, ಶಕೀಲಹಮ್ಮದ ಜಾಗೀರದಾರ,
ಮೌಲಾಲಿ ಹತ್ತರಕಿಹಾಳ,
ಮಲ್ಲು ಬುದ್ನಿ, ಬಾಷಾ ನಾಗರಾಳ, ಡೋಂಗ್ರಿ ಹತ್ತರಕಿಹಾಳ, ಯಾಸೀನ ಹತ್ತರಕಿಹಾಳ, ಬಸವರಾಜ ಮೇಲಿನಮನಿ, ಮೌಲಾಲಿ ದೇಗಿನಾಳ, ದಸ್ತಗಿರ ಸರಕುಲ್ಲಿ, ಬಂದೇನಾಮಾಜ ಮಕಾಂದಾರ, ಜಾವೀದ ಹೆಬ್ಬಾಳ, ಮೌಬೂಬ ಹೆಬ್ಬಾಳ, ಬಸೀರ ತಾಳೀಕೋಟಿ, ಹುಸೇನಬಾಷಾ ಮಲಘಾಣ, ಲಾಯಕಲಿ ಬಿಜಾಪುರ, ಸೇರಿದಂತೆ ಇತರರು ಇದ್ದರು

# ವಿಜಯಪುರ | 8 ರೌಡಿ ಶೀಟರ್ ಗಡಿಪಾರು: ಎಸ್‌ಪಿ ಲಕ್ಷ್ಮಣ ನಿಂಬರಗಿ ಆದೇಶ



**ವಿಜಯಪುರ :** ಜಿಲ್ಲೆಯಲ್ಲಿ ಮುಂಬರುವ ಹಬ್ಬಗಳ ಸಂದರ್ಭದಲ್ಲಿ ಅಹಿತಕರ ಘಟನೆಗಳು ಆಗದಂತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಎಂಟು ರೌಡಿಶೀಟರ್‌ಗಳನ್ನು ವಿವಿಧ ಜಿಲ್ಲೆಗಳಿಗೆ ಗಡೀಪಾರು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಆದೇಶ ಹೊರಡಿಸಿದ್ದಾರೆ.

ರವಿ ಬಾಡಗಂಡಿ(ಒಂದು ವರ್ಷ, ಕಲಬುರಗಿ ಜಿಲ್ಲೆಯ ಸೇಡಂ ಪೊಲೀಸ್ ಠಾಣೆ ವ್ಯಾಪ್ತಿ), ಮಹಮ್ಮದ್ ಹನೀಫ್ ಬಾಗವಾನ್ (ಆರು ತಿಂಗಳು, ಶಿವಮೊಗ್ಗ ಜಿಲ್ಲೆಯ ಆನವಟ್ಟಿ ಪೊಲೀಸ್ ಠಾಣೆ ವ್ಯಾಪ್ತಿ), ರವಿ ನಂದಿ (ಆರು ತಿಂಗಳು, ಚಾಮರಾಜನಗರ ಜಿಲ್ಲೆಯ ಯಳಂದೂರು ಪೊಲೀಸ್ ಠಾಣೆ ವ್ಯಾಪ್ತಿ), ಮಹಮ್ಮದ್ ಸಾಜೀದ ಸತ್ತಾರ(ಆರು ತಿಂಗಳು, ಬೀದರ್ ಜಿಲ್ಲೆ ಬಾಲ್ಕಿ ಪೊಲೀಸ್ ಠಾಣೆ ವ್ಯಾಪ್ತಿ), ಜಮೀರ್ ಮುಲ್ಲಾ( ಮೂರು ತಿಂಗಳು, ಬಳ್ಳಾರಿ ಜಿಲ್ಲೆ ಕುರುಗೋಡು ಪೊಲೀಸ್ ಠಾಣೆ ವ್ಯಾಪ್ತಿ), ಹಣಮಂತಪ್ಪ ಹಳ್ಳಿ (ಮೂರು ತಿಂಗಳು, ಧಾರವಾಡ ಜಿಲ್ಲೆ ಅಣ್ಣಿಗೇರಿ ಪೊಲೀಸ್ ಠಾಣೆ ವ್ಯಾಪ್ತಿ), ಚೇತನ ಜತ್ತಿ (ಆರು ತಿಂಗಳು, ಕಲಬುರಗಿ ಜಿಲ್ಲೆ ಸುಲೇಪೇಟೆ ಪೊಲೀಸ್ ಠಾಣೆ) ಹಾಗೂ ಯಮನಪ್ಪ ಕಟ್ಟಿಮನಿ (ಆರು ತಿಂಗಳು, ಹಾವೇರಿ ಜಿಲ್ಲೆ ರಟ್ಟಿಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿ)ಗೆ ಗಡೀಪಾರು ಮಾಡಲಾಗಿದೆ.

ಜಿಲ್ಲೆಯಲ್ಲಿ 1,212 ರೌಡಿಗಳಿದ್ದು, ಅದರಲ್ಲಿ ಕೊಲೆ, ಕೊಲೆಗೆ ಯತ್ನ, ದರೋಡೆ, ಕಳವು, ಆಯುಧ ಕಾಯ್ದೆ, ದೊಂಬಿ, ಹಲ್ಲೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ 27 ರೌಡಿಗಳ ಗಡೀಪಾರು ಮಾಡಲು ಉಪ ವಿಭಾಗಿಯ ದಂಡಾಧಿಕಾರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದರು. ಇದರಲ್ಲಿ ಎಂಟು ರೌಡಿಗಳನ್ನು ಗಡೀಪಾರು ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಂಬರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಳೆಯಿಂದ ನಷ್ಟ:ಸಚಿವ ಪಾಟೀಲರಿಂದ ಆರ್ಥಿಕ ನೆರವು



**ವಿಜಯಪುರ :** ಮಳೆಯಿಂದ ನಷ್ಟ ಅನುಭವಿಸಿದ ನಗರದ ಎರಡು ಕುಟುಂಬಗಳಿಗೆ ಕೈಗಾರಿಕೆ, ಮೂಲಸೌಲಭ್ಯಅಭಿವೃದ್ಧಿಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿದ್ದಾರೆ.

ವಿಜಯಪುರ ನಗರದಲ್ಲಿ ಮಳೆಯಿಂದ ಹಾನಿಗೀಡಾದ ಸ್ಥಳಗಳಿಗೆ ಸಚಿವರು ಆಗಷ್ಟ 15ರಂದು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಅಂದು ರಾಮನಗರ ಬಳಿಯ ನೆಹರು ನಗರ ನಿವಾಸಿ ಅಚ್ಯುತ್ ಆಚಾರ ಪುರೋಹಿತ ಮತ್ತು ರಾಜಾಜಿನಗರದ ನಿವಾಸಿ ಜಾಫರ್ ಅಹ್ಮದ್ ಇನಾಮದಾರ ಅವರ ಕುಟುಂಬಕ್ಕೆ ತಲಾ ರೂ. 50 ಸಾವಿರ ವೈಯಕ್ತಿಕ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದರು.

ಅದರಂತೆ ಸಚಿವರು ಇದೀಗ ಎರಡೂ ಕುಟುಂಬಗಳಿಗೆ ತಲಾ ರೂ. 50 ಸಾವಿರ ಆರ್ಥಿಕ ನೆರವು ನೀಡಿದ್ದಾರೆ.

ಸಚಿವರು ನೀಡಿದ ಹಣವನ್ನು ಕೆಪಿಸಿಸಿ ಸದಸ್ಯ ಮತ್ತು ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರಿಫ್ ಮತ್ತು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ ಅವರು ಇಂದು ಬುಧವಾರ ಎರಡೂ ಕುಟುಂಬಗಳಿಗೆ ತಲುಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನೆಹರು ನಗರ ನಿವಾಸಿ ಅಚ್ಯುತ ಆಚಾರ ಪುರೋಹಿತ, ಮೊನ್ನೆ ಸಚಿವರುನಮ್ಮಬಡಾವಣೆಗೆಭೇಟಿ ನೀಡಿದಾಗ ಮಳೆ ನೀರಿನಿಂದಾದ ತೊಂದರೆಯನ್ನು ಗಮನಿಸಿದ್ದರು. ಅಲ್ಲದೇ, ಅಂದು ನೀಡಿದ ಭರವಸೆಯಂತೆ ಇಂದು ಆರ್ಥಿಕ ನೆರವು ತಲುಪಿಸಿದ್ದಾರೆ. ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ರಾಜಾಜಿನಗರ ನಿವಾಸಿ ಜಾಫರ್ ಅಹ್ಮದ್ ಇನಾಮದಾರ ಮಾತನಾಡಿ, ಮಳೆಯಿಂದಾಗಿ ನಮ್ಮ ಮನೆಗೆ ನೀರು ನುಗ್ಗಿ ಹಾನಿಯಾಗಿತ್ತು.

ನಾನು ಅನಾರೋಗ್ಯ ಪೀಡಿತನಾಗಿದ್ದು, ಸಚಿವರು ಇಲ್ಲಿಗೆ ಭೇಟಿ ನೀಡಿದಾಗ ವಸ್ತುಸ್ಥಿತಿಯನ್ನುಕಂಡುವೈಯಕ್ತಿಕ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದರು. ಇಂದು ಹಣ ತಲುಪಿಸುವ ಮೂಲಕ ನಮಗೆ ಸಹಾಯ ಮಾಡಿದ್ದಾರೆ. ಅವರ ಉಪಕಾರವನ್ನು ಸದಾ ಸ್ಮರಿಸುತ್ತೇನೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರಿಫ್ ಮಾತನಾಡಿ, ಸಚಿವ ಎಂ. ಬಿ. ಪಾಟೀಲ ಅವರು ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದು, ನಗರದಲ್ಲಿ ಮಳೆಯಿಂದ ಆಗುತ್ತಿರುವ ಸಮಸ್ಯೆಗಳ ನಿಗಾ ವಹಿಸಿದ್ದಾರೆ. ಅಲ್ಲದೇ, ಮಳೆ ನೀರು ಸರಾಗವಾಗಿ ಹರಿದು ಹೋಗಲು ಈಗಾಗಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈಗ ಮಳೆಸಂತ್ರಸ್ತ ಎರಡು ಕುಟುಂಬಗಳಿಗೆ ವೈಯಕ್ತಿಕ ಪರಿಹಾರ ನೀಡುವ ಮೂಲಕ ನುಡಿದಂತೆ ನಡೆಯುತ್ತಿದ್ದಾರೆ.

ಈ ಹಿಂದೆಯೂ ಕೂಡ ಸಚಿವರು ಅನೇಕ ಸಲ ಸಂತ್ರಸ್ತರಿಗೆ ನೆರವು ಒದಗಿಸಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಅಶ್ಫಾಕ್ ಮನಗೂಳಿ, ಹೊನಮಲ್ಲ ಸಾರವಾಡ, ಬಾಬು ಏಳಗಂಟಿ, ವಸಂತ ಹೊನಮೋಡೆ, ಚನ್ನು ಕಟ್ಟಿಮನಿ, ಮಂಜುಳಾ ಗಾಯಕವಾಡ, ಸವಿತಾ ಧನರಾಜ ಉಪಸ್ಥಿತರಿದ್ದರು.

# ಸಾಮಾಜಿಕ ಏಳಿಗೆಗೆ ಅರಸು ಕೊಡುಗೆ ಅಪಾರ: ಸಂಗಮೇಶ ಬಬಲೇಶ್ವರ



**ವಿಜಯಪುರ :** 'ಹಿಂದುಳಿದ ವರ್ಗಗಳ, ಶೋಷಿತರ ಅಭಿವೃದ್ಧಿಗೆ ಶ್ರಮಿಸಿದ ಡಿ. ದೇವರಾಜ ಅರಸು ಅವರು ಉಳುವವನೇ ಭೂ ಒಡೆಯ ಎನ್ನುವ ಭೂ ಸುಧಾರಣಾ
ಕಾಯಿದೆ ಜಾರಿಗೆ ತರುವ ಮೂಲಕ ಸಾಮಾಜಿಕ ಪರಿವರ್ತನೆ ಹಾಗೂ ಸಾಮಾಜಿಕ ಏಳಿಗೆಗೆ
ಶ್ರಮಿಸಿದ್ದಾರೆ' ಎಂದು ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಬುಧವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110 ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾಧಿಕಾರಿ ಡಾ. ಆನಂದ ಕೆ. ಮಾತನಾಡಿ, 'ಅರಸು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಿ, ಅವರು ನಾಡು ನುಡಿಗಾಗಿ ಶ್ರಮಿಸಿದ್ದಾರೆ' ಎಂದರು.

ಏಕ್ಸಲಂಟ್ ಕಾಲೇಜಿನ ಉಪ ಪ್ರಾಂಶುಪಾಲ ಮಂಜುನಾಥ ಜುನಗೊಂಡ ಮಾತನಾಡಿ, 'ಹಿಂದುಳಿದ ವರ್ಗಗಳ ಆಶಾದೀಪ, ಆರ್ಥಿಕ, ಶೈಕ್ಷಣಿಕ ಸಮಗ್ರ ಚಿಂತನೆಗಳ ಕಾರ್ಯಕ್ರಮ ರೂಪಿಸಿ ಅನುಷ್ಠಾನಕ್ಕೆ ತಂದರು.

ಈ ಮಹನೀಯರ ಚಿಂತನೆಗಳನ್ನು ಇಂದಿನ ಯುವಕರು ಅರಿತುಕೊಳ್ಳಬೇಕು' ಎಂದು ಹೇಳಿದರು.

ವಿವಿಧ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಭರತನಾಟ್ಯ ಕಲಾವಿದ ರಂಗನಾಥ ಬತಾಶೆ ಹಾಗೂ ತಂಡದಿಂದ ನೃತ್ಯಕಲಾ ಪ್ರದರ್ಶನ ಮಾಡಲಾಯಿತು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ
ರಿಷಿ ಆನಂದ್,
ಮೇಯರ್ ಎಂ.ಎಸ್.ಕರಡಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಇಲಿಯಾಸ್ ಬೋರಾಮಣಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮನಗೌಡ ಹಟ್ಟಿ, ಪಾಲಿಕೆ ಉಪ ಆಯುಕ್ತ ವೈ.ಎಚ್. ನಾರಾಯಣಕರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಪುಂಡಲೀಕ ಮಾನವರ, ಸೋಮನಾಥ ಕಳ್ಳಿಮನಿ, ಅಡಿವೆಪ್ಪ ಸಾಲಗಲ್, ಸಿದ್ದು ರಾಯಣ್ಣವರ ಇದ್ದರು.

# ರಾಜೀವಗಾಂಧಿ, ಅರಸು ಜನ್ಮದಿನಾಚರಣೆ

**ವಿಜಯಪುರ :** ಮಾಜಿ ಪ್ರಧಾನಿ ದಿ.ರಾಜೀವಗಾಂಧಿಜಿಯವರ 81 ನೇ ಜನ್ಮದಿನಾಚರಣೆ ಹಾಗೂ ಕರ್ನಾಟಕ ಸರಕಾರದ ಮಾಜಿ ಮುಖ್ಯ ಮಂತ್ರಿಗಳಾದ ದಿ.ಡಿ.ದೇವರಾಜಅರಸರವರ 110ನೇ ಜನ್ಮ ಕಾರ್ಯಲಯದದಲ್ಲಿ ಆಚರಿಸಲಾಯಿತು.

ದೇಶಕ್ಕೆ ಗಣಕಯಂತ್ರಗಳನ್ನು ಪರಿಚಯಿಸಿದ ದಿ.ರಾಜೀವಗಾಂಧಿಜಿಯವರುಪಂಚಾಯತ ರಾಜ ವ್ಯವಸ್ಥೆಯನ್ನು ಜಾರಿಗೆತಂದು ಅಧಿಕಾರ ವಿಕೇಂದ್ರಿಕರಣಗೊಳಿಸಿದ್ದಲ್ಲದೆ,18 ವರ್ಷದಯುವಕರಿಗೆ ಮತದಾನದ ಹಕ್ಕನ್ನು ನೀಡಿದರು. ಅಂತಹ ಮಹಾನ ನಾಯಕರಿಗೆ ಗೌರವಪೂರ್ವಕವಾಗಿ ನಮನಗಳನ್ನು ಸಲ್ಲಿಸಲಾಯಿತು.ಅದರಂತೆ ಮಾಜಿ ಮುಖ್ಯ ಮಂತ್ರಿಗಳು ಸಮಾಜಿಕಕ್ರಾಂತಿಯ ಹರಿಕಾರರೆಂದೆಖ್ಯಾತರಾದಡಿ.

ದೇವರಾಜ ಅರಸರವರುದ್ವನಿಯಿಲ್ಲದ



ಸಣ್ಣ ಸಣ್ಣ ಸಮುದಾಯಗಳ ದ್ವನಿಯಾಗಿರಾಜಕೀಯ ಪ್ರಾತಿನಿಧ್ಯ ನೀಡಿಅವರನ್ನು ಮುಖ್ಯವಾಹಿನಿಗೆ ತರುವಲ್ಲಿಅತಿ ಹೆಚ್ಚು ಕೊಡುಗೆಯನ್ನು ನೀಡಿದರು. ದೇಶದಲ್ಲಿಯೇ ಮಾದರಿಯಾಗಿಕರ್ನಾಟಕದಕೀರ್ತಿಯನ್ನು ಹೆಚ್ಚಿಸಿದರು. ಈ ಸಂದರ್ಭದಲ್ಲಿ ಕೆ.ಪಿ.ಸಿ.ಸಿ. ಸದಸ್ಯರು, ಕಾಂಗ್ರೆಸ್ ಮುಖಂಡರಾದ ಅಬ್ದುಲಹಮೀದ ಮುಶ್ರೀಫ್, ಜಿಲ್ಲಾಕಾಂಗ್ರೆಸ್ ಉಪಾಧ್ಯಕ್ಷರುಗಳಾದ ವೈಜನಾಥಕರ್ಪೂರಮಠ, ಚಾಂದಸಾಬ ಗಡಗಲಾವ, ಡಾ. ಗಂಗಾಧರ ಸಂಬಣ್ಣಿ, ಸುಭಾಶಕಾಲೇಬಾಗ,ಬ್ಲಾಕ್‌ಅಧ್ಯಕ್ಷರುಗಳಾದ ಜಮೀರಅಹ್ಮದ ಬಕ್ಷಿ, ಆರತಿ ಶಹಾಪೂರ, ಜಿಲ್ಲಾಪ್ರಧಾನಕಾರ್ಯದರ್ಶಿಗಳಾದವಸಂತ ಹೊನಮೊಡೆ, ವಿಜಯಕುಮಾರಘಾಟಗೆ, ದೇಸುಚವ್ಹಾಣ, ಅಶ್ಫಾಕ ಮನಗೂಳಿ, ಶರಣಪ್ಪಯಕ್ಕುಂಡಿ, ಜಿಲ್ಲಾಕಾಂಗ್ರೆಸ್ ಅಂಗ ಘಟಕಗಳ ಅಧ್ಯಕ್ಷರುಗಳಾದ ಸಾಹೇಬಗೌಡ ಬಿರಾದಾರ, ರಮೇಶಗುಬ್ಬೇವಾಡ, ಸರಫರಾಜ ಮಿರ್ದೆ,ಹುಸೇನಸಾಬ ಮುಲ್ಲಾ, ಕಾಂಗ್ರೆಸ್‌ನಮುಖಂಡರುಗಳಾದಸಂತೋಷ ಬಾಲಗಾಂವಿ, ಪರಸುರಾಮ ಹೊಸಮನಿ, ವಿರೇಶ ಕಲಾಲ, ಡಾ.ಶರಣಬಸಪ್ಪಚೌರ, ಮಂಜುಳಾ ಗಾಯಕವಾಡ, ಭಾರತಿ ನಾವಿ, ಸವಿತಾಧನರಾಜ, ರುಕ್ಮಿಣಿಚವ್ಹಾಣ, ಮಾಂತಯ್ಯ ಹಿರೇಮಠ, ತಾಜೋದ್ದಿನ ಖಲಿಫಾ, ಐಜಾಜ ಮುಖಬಿಲ್, ಸಾಜೀದರಿಸಾಲದಾರ, ಬಾಬು ಏಳಗಂಟಿ, ಕಲ್ಲಪ್ಪ ಪಡಶೆಟ್ಟಿ, ವಿಠ್ಠಲ ಸಂದಿಮನಿ, ಧನರಾಜ .ಎ., ಸಾಗರ ಪೂಜಾರಿ, ಫೀರೋಜಶೇಖ, ಮಹಿಬೂಬ ಕಲಾದಗಿ, ಜಯಪ್ರಭು ಕೊಳಮಲಿ, ಇಲಿಯಾಸಅಹ್ಮದ ಸಿದ್ಧಖಿ ಹಾಗೂ ಮುಂತಾದ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು ಎಂದುಕಾಂಗ್ರೆಸ್ ಪಕ್ಷದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

# ಪ್ರೌಢಶಾಲಾ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ

**ಕಲಾದಗಿ :** ಗ್ರಾಮದ ಹಣ್ಣು ಬೆಳೆಗಾರರ ಪ್ರೌಢಶಾಲೆ ಹಾಗೂ ಗುರುಲಿಂಗೇಶ್ವರ ಪ್ರೌಢಶಾಲಾ ಆವರಣದಲ್ಲಿ ಈಚೆಗೆ ನಡೆದ ಪ್ರೌಢಶಾಲಾ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಎಂ.ಐ.ಹುರಕಡ್ಲಿ ಸರ್ಕಾರಿ ಪ್ರೌಢಶಾಲೆ ಚಿಕ್ಕಶೆಲ್ಲಿಕೇರಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಗುಂಪು ಆಟಗಳು : ಬಾಲಕರ ಥ್ರೋ ಬಾಲ್ ಪ್ರಥಮ, ಕಬಡ್ಡಿ ದ್ವಿತೀಯ, ರಿಲೇ ದ್ವಿತೀಯ, ಬಾಲಕಿಯರ ವಾಲಿಬಾಲ್ ಪ್ರಥಮ, ಥ್ರೋ ಬಾಲ್ ದ್ವಿತೀಯ,

ವೈಯಕ್ತಿಕ ವಿಭಾಗದಲ್ಲಿ : 1500 ಮೀ. ಮಂಜುನಾಥ ತಳವಾರ ದ್ವಿತೀಯ, 110 ಮೀ.ಅಡೆತಡೆ ಸ್ಪರ್ಧೆಯಲ್ಲಿ ಹನಮಂತಗೌಡ ನಾಯ್ಕರ್ ಪ್ರಥಮ್, ಉದ್ದ ಜಿಗಿತ ದ್ವಿತೀಯ ಬಸವರಾಜ ಕಲ್ಪಡಿ, ಗುಂಡು ಎಸೆತ ದ್ವಿತೀಯ



ಸ್ಥಾನ ಮಲ್ಲಿಕಾರ್ಜುನ ಕೋಟೆಕಲ್, ಸರಪಳಿ ಗುಂಡು ಎಸೆತ ದ್ವಿತೀಯ ನಂದಯ್ಯ ಶಿಕಲೋಡಿ, ಚಕ್ರ ಎಸೆತ ಪ್ರಥಮ ಮಲ್ಲಿಕಾರ್ಜುನ ಕೋಟೆಕಲ್, ದ್ವಿತೀಯ ಪವನ್ ಪೂಜಾರ, 800 ಮೀಟರ್ ಕೋಟ ತೃತೀಯ ಸ್ಥಾನ ಮಲ್ಲಿಕಾರ್ಜುನ ಕೋಟೆಕಲ್,

ಬಾಲಕಿಯರ ವಿಭಾಗದಲ್ಲಿ ಎತ್ತರ ಜಿಗಿತ ಸ್ಪರ್ಧೆಯಲ್ಲಿ ಪ್ರಥ–'ಮ ಸ್ಥಾನ ಜ್ಯೋತಿ ತರಲಿ, ದ್ವಿತೀಯ ಸ್ಥಾನ ಸೌಂದರ್ಯ ಕುಂಬಾರ, ಸರಪಳಿ ಗುಂಡು ಎಸೆತ ದ್ವಿತೀಯ ತನುಜಾ ಬಂದವ್ವಗೋಳ, ಚಕ್ರ ಎಸೆತ ಸ್ಪರ್ಧೆ ದ್ವಿತೀಯ ಸ್ಥಾನ ತನುಜಾ ಬಂದವ್ವ ಗೋಳ, 100 ಮೀಟರ್ ಓಟ ತೃತೀಯ ಸ್ಥಾನ ಪ್ರಿಯಾ ಕೊಡಬಾಗಿ, ಬಲ್ಲೆ ಎಸೆತ ತೃತೀಯ ಸ್ಥಾನ ಲಕ್ಷ್ಮಿ ಮಂಟೂರ ಉತ್ತಮ ಸಾಧನೆ ಮಾಡಿದ್ದಾರೆ ವಿದ್ಯಾರ್ಥಿಗಳ ಈ ಸಾಧನೆಗೆ ಪ್ರೌಢಶಾಲಾ ಮುಖ್ಯ ಶಿಕ್ಷಕಿ ಮನಿಯಾರ ಹಾಗೂ ಶಾಲಾ ಎಸ್ಡಿಎಂಸಿ ಅಧ್ಯಕ್ಷ ಕಾಶಪ್ಪ ಗೋಳಬಾಳ, ದೈಹಿಕ ಶಿಕ್ಷಣ ಶಿಕ್ಷಕ ಸುಭಾಸ ಬೀಳಗಿ ಹಾಗೂ ಶಿಕ್ಷಕ ವೃಂದ ಅಭಿನಂದನೆ ಸಲ್ಲಿಸಿದ್ದಾರೆ.

# ಸಾಲಬಾಧೆ: ರೈತ ಆತ್ಮಹತ್ಯೆ

**ಕಲಬುರಗಿ :** ಸಾಲಬಾಧೆ ತಾಳದೆ ನೇಣು ಹಾಕಿಕೊಂಡು ರೈತ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೌಲಗಾ (ಬಿ) ಗ್ರಾಮದಲ್ಲಿ ನಡೆದಿದೆ.




ಹಣಮಂತ ತಂದೆ ಬಸವರಾಜ ಮೊಸಂಡಿ (35) ಆತ್ಮಹತ್ಯೆ ಮಾಡಿಕೊಂಡಿರುವ ರೈತ.

ಹೊಲದಲ್ಲಿರುವ ಬಾವಿಯ ದಂಡಿ ಮೇಲೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, 3 ಎಕರೆ ಜಮೀನು ಇದೆ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ 2 ಲಕ್ಷ ಮತ್ತು ಖಾಸಗಿಯಾಗಿ 3.50 ಲಕ್ಷ ಸಾಲವಾಗಿತ್ತು ಎಂದು ತಿಳಿದುಬಂದಿದೆ. ಮೃತ ರೈತನಿಗೆ ಪತ್ನಿ ಮತ್ತು ಒಬ್ಬ ಪುತ್ರ ಇದ್ದಾನೆ ಎಂದು ತಿಳಿದುಬಂದಿದ್ದು, ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಪರಿಹಾರಕ್ಕೆ ಆಗ್ರಹ**

ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ಕೌಲಗಾ (ಬಿ) ಗ್ರಾಮದ ರೈತ ಹಣಮಂತ ಮೊಸಂಡಿ ಅವರ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕು, ಸಾಲ ಋಣ ಮುಕ್ತ ಕಾಯ್ದೆ ಜಾರಿಗೆ ತರಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ ಆಗ್ರಹಿಸಿದ್ದಾರೆ.

# ಕಸ ಕಂಡರೆ ಚಿತ್ರ ಕಳುಹಿಸಿ ಅಭಿಯಾನ: ಜಿಲ್ಲಾಧಿಕಾರಿ ಡಾ.ಆನಂದ

**ವಿಜಯಪುರ :** ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಬಡಾವಣೆ, ರಸ್ತೆ ಬದಿ, ಉದ್ಯಾನ,
ಖಾಲಿ ನಿವೇಶನಗಳಲ್ಲಿ ಸಂಗ್ರಹವಾದ ತ್ಯಾಜ್ಯವನ್ನು ಸಾರ್ವಜನಿಕರ ಸಹಕಾರದೊಂದಿಗೆ ದೂರು ಸ್ವೀಕರಿಸಿದ 24 ಗಂಟೆಯೊಳಗೆ ವಿಲೇವಾರಿ ಮಾಡಲು 'ಕಸ ಕಂಡರೆ ಫೋಟೋ ಕಳುಹಿಸಿ' ಎಂಬ ಅಭಿಯಾನವನ್ನು ಜಿಲ್ಲೆಯಲ್ಲಿ ಆರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ತಿಳಿಸಿದ್ದಾರೆ.

ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ವಿಶೇಷ ಆಸಕ್ತಿ ವಹಿಸಿ ಈ ಅಭಿಯಾನದ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸಿ ಯಶಸ್ವಿಗೊಳಿಸುವಂತೆ

| ಅ.ನಂ | ಸ್ಥಳೀಯ ಸಂಸ್ಥೆ ಹೆಸರು | ವಾಟ್ಸಪ್ ಸಂಖ್ಯೆ |
|---|---|---|
| 1 | ಮಹಾನಗರ ಪಾಲಿಕೆ ವಿಜಯಪುರ | 9480138423 |
| 2 | ಪುರಸಭೆ ಬಸವನ ಬಾಗೇವಾಡಿ | 7795108386 |
| 3 | ಪುರಸಭೆ ಇಂಡಿ | 7899157710 |
| 4 | ಪುರಸಭೆ ಮುದ್ದೇಬಿಹಾಳ | 6364671268 |
| 5 | ಪುರಸಭೆ ಸಿಂದಗಿ | 7337888490 |
| 6 | ಪುರಸಭೆ ತಾಳಿಕೋಟಿ | 8618696663 |
| 7 | ಪಟ್ಟಣ ಪಂಚಾಯತ ಆಲಮೇಲ | 8618200214 |
| 8 | ಪಟ್ಟಣ ಪಂಚಾಯತ ಬಬಲೇಶ್ವರ | 9380707018 |
| 9 | ಪಟ್ಟಣ ಪಂಚಾಯತ ಚಡಚಣ | 9113810044 |
| 10 | ಪಟ್ಟಣ ಪಂಚಾಯತ ದೇವರಹಿಪ್ಪರಗಿ | 9739858524 |
| 11 | ಪಟ್ಟಣ ಪಂಚಾಯತ ಕೋಲ್ಹಾರ | 6366320136 |
| 12 | ಪಟ್ಟಣ ಪಂಚಾಯತ ಮನಗೂಳಿ | 9480346106 |
| 13 | ಪಟ್ಟಣ ಪಂಚಾಯತ ನಾಲತವಾಡ | 6364671889 |
| 14 | ಪಟ್ಟಣ ಪಂಚಾಯತ ನಿಡಗುಂದಿ | 7483071046 |
| 15 | ಪಟ್ಟಣ ಪಂಚಾಯತ ತಿಕೋಟಾ | 8088476262 |

ಅವರು ಸೂಚನೆ ನೀಡಿದ್ದಾರೆ.

ಕಸ ಕಂಡರೆ ಫೋಟೋ ಕಳುಹಿಸಿ' ಅಭಿಯಾನ ಯಶಸ್ವಿಗೊಳಿಸಲು ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಕಸ ಕಂಡಾಗ ತಕ್ಷಣದ ಫೋಟೋ ಮೂಲಕ ದೂರು ಸಲ್ಲಿಸುವ ವ್ಯವಸ್ಥೆ ಕಲ್ಪಿಸುವುದು, ಸಾರ್ವಜನಿಕರ ಸಹಭಾಗಿತ್ವದಲ್ಲಿ ಸ್ವಚ್ಛ ನಗರ ನಿರ್ಮಾಣ, ದೂರು ಬಂದ 24 ಗಂಟೆಯೊಳಗೆ ಪರಿಹಾರ ಒದಗಿಸುವ ಮೂಲಕ ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸುವುದು, ದೂರುಗಳಿಂದ ಬಂದ ಡೇಟಾವನ್ನು ವಿಶ್ಲೇಷಿಸಿ ಬ್ಲಾಕ್‌ಸ್ಪಾಟ್ ಏರಿಯಾ ಗುರುತಿಸಿ ಭವಿಷ್ಯದ ಕ್ಲೀನಿಂಗ್ ಪ್ಲಾನ್‌ನಲ್ಲಿ ಸೇರಿಸುವ ಅಭಿಯಾನದ ಉದ್ದೇಶವಾಗಿದೆ' ಎಂದು ತಿಳಿಸಿದ್ದಾರೆ.

ಕಸಕಂಡರೆಫೋಟೋಕಳುಹಿಸಿ'ಮೊಬೈಲ್ ಸಂಖ್ಯೆಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದು, ಫೇಸ್‌ಬುಕ್, ವಾಟ್ಸ್ ಆಯಪ್, ಇನ್ಸ್ಟಾಗ್ರಾಂನಲ್ಲಿ ಪೋಸ್ಟರ್, ವಿಡಿಯೋ ಶೇರ್ ಮಾಡುವುದು, ನಗರ ಸ್ಥಳೀಯ ಸಂಸ್ಥೆಯ ಅಧಿಕೃತ ವೆಬ್‌ಸೈಟ್–ಮೆಸೆಜ್ ಫಾರ್ಮನಲ್ಲಿ ಮಾಹಿತಿ, ಶಾಲಾ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು,

ವಿವಿಧ ಕಡೆಗಳಲ್ಲಿ ಜಾಗೃತಿಗೆ ಫ್ಲೆಕ್ಸ್ ಅಳವಡಿಸುವುದು, ಕಮ್ಯೂನಿಟಿ ಮೊಬಲೈಜರ್ ಬಳಕೆ ಮಾಡಿಕೊಂಡು ಡೋರ್–ಟು–ಡೋರ್ ಕ್ಯಾಂಪಸ್ ಮೂಲಕ ಪ್ರಚಾರ ಮಾಡುವಂತೆ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದೆ ಎಂದರು.

# ಧರ್ಮಸ್ಥಳ ಗ್ರಾಮವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಿದ ಡಾ|| ಡಿ. ವೀರೇಂದ್ರ ಹೆಗ್ಗಡೆ: ನ್ಯಾಯವಾದಿ ಮಹ್ಮದಗೌಸ ಹವಾಲ್ದಾರ್

**ವಿಜಯಪುರ :** ಶ್ರೀ ಮಹ್ಮದಗೌಸ ಹವಾಲ್ದಾರ್ ಎಂಬ ಗ್ರಾಮೀಣ ಭಾಗದ ಮುಸ್ಲಿಂ ಸಮುಧಾಯಕ್ಕೆ ಸೇರಿದ ಯುವಕ ನನ್ನನ್ನು ರಾಜ್ಯವ್ಯಾಪಿ ಪರಿಚಯಿಸುವಂತೆ ಮಾಡಿದವರು ಡಾ! ವೀರೇಂದ್ರ ಹೆಗಡೆಯವರು..

ಒಬ್ಬ ಜ್ಯಾತ್ಯಾತೀತ ಸಮತಾ ಸಮಾಜದ ಶಿಲ್ಪಿ ಅಂತ ನಾನು ಅವರನ್ನು ಕರೆಯಲಿಕ್ಕೆ ಇಚ್ಚೆ ಪಡ್ತಿನಿ ಪ್ರತಿ ವರ್ಷ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯುವ "ಲಕ್ಷ ದೀಪೋತ್ಸವದ" 91ನೇ ಅಧಿವೇಶನದ ಸರ್ವಧರ್ಮ ಸಮ್ಮೇಳನದಲ್ಲಿ ನನ್ನನ್ನು ಇಡೀ ರಾಜ್ಯದಲ್ಲಿ ಏಕೈಕ ಮುಸ್ಲಿಂ ಸಮುಧಾಯಕ್ಕೆ ಸೇರಿದ ಯುವಕನನ್ನು ಆಯ್ಕೆ ಮಾಡಿ "ಮಧ್ಯಕಾಲಿನ ಭಾರತದಲ್ಲಿ ಧರ್ಮ ಸಮನ್ವಯತೆ" ಎಂಬ ವಿಷಯದ ಮೇಲೆ ಲಕ್ಷಾಂತರ ಭಕ್ತ ಸಮೂಹದ ಮಧ್ಯ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಉಪನ್ಯಾಸ ಮಾಡಿಸಿ ಭಾವೈಕ್ಯತೆಗೆ ಮುನ್ನುಡಿ ಬರೆದವರು ಡಾ! ಡಿ. ವೀರೇಂದ್ರ ಹೆಗ್ಗಡೆಯವರು.

ಈಕಾರ್ಯಕ್ರಮದಅಧ್ಯಕ್ಷತೆಯನ್ನು ತುಮಕೂರು ಸಿದ್ಧಗಂಗಾ ಮಠದ ಪೀಠದೀಪತಿಗಳಾದ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಉದ್ಘಾಟಕರಾಗಿ ಶ್ರೇಷ್ಠ ಶಿಕ್ಷಣ ತಜ್ಞ



ಡಾ! ಗುರುರಾಜ ಕರ್ಜಗಿಯವರು, ಕಾರ್ಯಕ್ರಮದ ನೇತೃತ್ವ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಪೂಜ್ಯ ಡಾ! ಡಿ. ವೀರೇಂದ್ರ ಹೆಗ್ಗಡೆಯವರು ನನ್ನೊಂದಿಗೆ ಇನ್ನಿಬ್ಬರು ರಾಷ್ಟ್ರಮಟ್ಟದ ಶ್ರೇಷ್ಠ ಉಪನ್ಯಾಸಕರು ಇಂತಹ ಮಹಾನ ವ್ಯಕ್ತಿಗಳ ಜೋತೆ ವೇದಿಕೆ ಹಂಚಿಕೊಂಡು ಒಬ್ಬ ಸಾಮಾನ್ಯ ಯುವಕನನ್ನು ರಾಜ್ಯ ಮಟ್ಟದಲ್ಲಿ ಪರಿಚಯಿಸುವಂತೆ ಮಾಡಿದವರು ಡಾ!ಡಿ.ವೀರೇಂದ್ರಹೆಗ್ಗಡೆಯವರು ಅನ್ನೋದನ್ನ ನಾವು ಯಾವತ್ತೂ ಮರೆಯುವ ಹಾಗಿಲ್ಲ.

ಅವರು ಶ್ರೀ ಕ್ಷೇತ್ರಕ್ಕೆ ನನ್ನನ್ನು ಕರೆಯಿಸಿಕೊಂಡು ಅವರು ನೀಡಿರತಕ್ಕಂತಹ ಅತಿಥಿ ಸತ್ಕಾರ, ಕೊಟ್ಟ ಗೌರವ, ಮಾಡಿದ ಸನ್ಮಾನ, ನನ್ನ ಘನತೆ ಹೆಚ್ಚಿಸುವಂತೆ ಮಾಡಿದ್ದು ನಿಜಕ್ಕೂ ಗಮನಾರ್ಹ ನಾನು ಅಂದು ಮಾಡಿದ 32 ನಿಮಿಷಗಳ ಕಾಲದ ಉಪನ್ಯಾಸ ಲಕ್ಷಾಂತರ ಜನ ವೀಕ್ಷಣೆ ಮಾಡಿದ್ದೂ ಇಂದಿಗೂ ಸಾಮಾಜಿಕ ಮಾಧ್ಯಮದದಲ್ಲಿ ಹರೆದಾಡುತ್ತಾ ಇದೆ..

ಇಂತಹ ಒಬ್ಬ ಜಾತ್ಯತೀತ ವ್ಯಕ್ತಿಯನ್ನು ಒಂದೇ ಧರ್ಮಕ್ಕೆ ಸೀಮಿತ ಮಾಡಿ ತೇಜೋವದೆ ಮಾಡುತ್ತಿರುವದನ್ನು ನೋಡಿದರೆ ಎಂತಹ ಮೂರ್ಖ ಸಮಾಜದ ಮಧ್ಯ ನಾವು ಇವತ್ತಿನ ದಿನ ಬದುಕುತ್ತಾ ಇದ್ದೇವೆ ಅನ್ನೋದನ್ನ ಆತ್ಮವಲೋಕನ ಮಾಡಿಕೊಳ್ಳಬೇಕು.

ಇವತ್ತು ಗ್ರಾಮೀಣ ಭಾಗದ ಬಡ ಮಹಿಳೆಯರು ಸ್ವಾವಲಂಬಿ ಜೀವನ ಸಾಗಿಸುತ್ತಿದ್ದಾರೆ ಎಂದರೆ ಅದು ಪೂಜ್ಯ ಡಾ! ಡಿ ವೀರೇಂದ್ರ ಹೆಗ್ಗಡೆ ಅವರ ಆಶೀರ್ವಾದ. ರುಡ್ ಸೆಟ್ ಸಂಸ್ಥೆಯ ಮೂಲಕ ಗ್ರಾಮೀಣ ಭಾಗದ ಬಡ ಯುವಕರಿಗೆ ಸ್ವಯಂ ಉದ್ಯೋಗ ತರಬೇತಿ ಕಲ್ಪಿಸಿ ದುಡಿಯುವ ಕೈಗಳಿಗೆ ಉದ್ಯೋಗ ಕಲ್ಪಿಸುವ ಕಾರ್ಯ, ಸಾವಿರಾರು ಕೆರೆಗಳ ಪುನಶ್ಚೇತನಗೊಳಿಸಿ ನೀರಿನ ಕೊರತೆಯನ್ನು ನಿವಾರಿಸಿದ್ದಾರೆ, ಮದ್ಯವರ್ಜನ ಶಿಬಿರಗಳನ್ನು ಏರ್ಪಡಿಸಿ ಮದ್ಯವ್ಯಸನಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದು, ಇನ್ನೂ ಸಾವಿರಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸುತ್ತಿದ್ದಾರೆ.

ಧರ್ಮಸ್ಥಳ ಎಂಬ ಗ್ರಾಮವನ್ನು ಸಾಮಾಜಿಕಕಾರ್ಯಗಳಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಿದವರು ಡಾ! ಡಿ. ವೀರೇಂದ್ರ ಹೆಗ್ಗಡೆಯವರು

ಶ್ರೀ ಕ್ಷೇತ್ರ ಧರ್ಮಸ್ಥಳ ಇದು ಕೇವಲ ಒಂದು ಜಾತಿ.ಒಂದು ವರ್ಗಕ್ಕೆ. ಒಂದು ಭಾಷೆ, ಒಂದು ಸಮುದಾಯಕ್ಕೆ ಸೇರಿದ ಕ್ಷೇತ್ರವಲ್ಲ ಈ ಕ್ಷೇತ್ರ ಇಡಿ ಭಾರತ ದೇಶದ ಧಾರ್ಮಿಕ ಕ್ಷೇತ್ರವಾಗಿದ್ದು, ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಪ್ರಚಾರ ಸಲ್ಲದು. ಅಪಪ್ರಚಾರ ಮಾಡುತ್ತಿರುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು.

ಕಾನೂನಾತ್ಮಕವಾಗಿ ಎಸ್‌ಐಟಿ ತನಗೆ ನಡೆಯಲಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ ಆದರೆ ಕೆಲವು ಕಿಡಿಗೇಡಿಗಳು ಇಲ್ಲ ಸಲ್ಲದ ಆರೋಪ ಹೊರಿಸಿ ಧರ್ಮಸ್ಥಳದ ಹೆಸರಿಗೆ ಮಸಿ ಬಳೆಯುವಂತ ಕಾರ್ಯ ಮಾಡುತ್ತಿರುವ ಕಿಡಿಗೇಡಿಗಳಿಗೆ ಧರ್ಮಸ್ಥಳದ ಮಂಜುನಾಥಸ್ವಾಮಿ ಅವ–ರಿಗೆ ಬುದ್ಧಿ ನೀಡಲಿ ಎಂದು ನ್ಯಾಯವಾದಿ ಮಹಮ್ಮದ್ ಗೌಸ್ ಹವಾಲ್ದಾರ್ ಹೇಳಿದರು.

# ಗಣೇಶ ಉತ್ಸವ ಸಮಯದಲ್ಲಿ ಡಿಜೆ ನಿಷೇಧ: ಡಿವಾಯ್ ಎಸ್ಪಿ ಕುಲಕರ್ಣಿ




**ಇಳಕಲ್ :** ಬರಲಿರುವ ಗಣೇಶ ಚತುರ್ಥಿ ಸಮಯದಲ್ಲಿ ಗಣೇಶ ಉತ್ಸವ ಆಚರಿಸುವ ಸಮಿತಿಯವರು ಡಿಜೆ ಬಳಸಬಾರದು ಎಂದು ಡಿವಾಯ್ ಎಸ್ ಪಿ ವಿಶ್ವನಾಥರಾವ್ ಕುಲಕರ್ಣಿ ಹೇಳಿದರು.

ಇಲ್ಲಿನ ಪೋಲಿಸ್ ಠಾಣೆಯ ಆವರಣದಲ್ಲಿ ಗಣೇಶ ಹಬ್ಬ ಮತ್ತು ಈದ್ ಮಿಲಾದ್ ಅಂಗವಾಗಿ ಏರ್ಪಡಿಸಿದ್ದ ಶಾಂತಿ ಸಮಿತಿಯ ಸಭೆಯಲ್ಲಿ ಮಾತನಾಡಿದ ಅವರು ಗಣೇಶ ವಿಸರ್ಜನೆ ಮಾಡುವ ಸಮಯದಲ್ಲಿ ಯಾರೂ ಇಲ್ಲದಿದ್ದರೂ ಡಿಜೆ ಸೌಂಡಿಗೆ ಕುಣಿಯುತ್ತಾ ಹಾರಾಡುತ್ತಿರಿ ಅದನ್ನು ನೋಡುವವರು ಯಾರು ಎಂದು ಕೇಳಿ ಅದೇ ಹಣವನ್ನು ಯಾವದೋ ಹಾಸ್ಟೆಲಿಗೆ,

ಇಲ್ಲವೇ ಆಶ್ರಮಗಳಿಗೆ ಕೊಟ್ಟರೆ ಒಂದೆರಡು ತಿಂಗಳು ನೆಮ್ಮದಿಯಿಂದ ಊಟ ಮಾಡಬಹುದು ಯಾರು ಯಾರಿಗೋ ಸತ್ಕಾರ ಮಾಡುವ ಬದಲು ನಿಮ್ಮ ನಿಮ್ಮ ಗಲ್ಲಿಗಳಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸತ್ಕರಿಸಿ ಅವರಿಗೆ ಮತ್ತು ಅವರ ಮನೆಯವರ ಮೊಗದಲ್ಲಿ ಸಂತೋಷ ಮೂಡಿಸಿ ಇಲ್ಲವೇ ನಿಮ್ಮ ಗಲ್ಲಿಯಲ್ಲಿ ಕೆಲಸ ಮಾಡುವ ಪೌರ ಕಾರ್ಮಿಕರನ್ನು ಗುರುತಿಸಿ ಅವರಿಗೆ ಸನ್ಮಾನ ಮಾಡಿ ಎಂದು ಕಿವಿಮಾತು ಹೇಳಿದರು.

ಗ್ರಾಮೀಣ ಪಿಎಸ್‌ಐ ಮಲ್ಲಿಕಾರ್ಜುನ ಸತ್ತಿಗೌಡರ ಮಾತನಾಡಿ ಎರಡೂ ಹಬ್ಬಗಳನ್ನು ಶಾಂತಿಯುತವಾಗಿ ಆಚರಿಸಿ ಎಂದು ಹೇಳಿದರು.

ವೇದಿಕೆಯಲ್ಲಿ ಗ್ರೇಡ್ ಟು ತಹಸೀಲ್ದಾರ ಈಶ್ವರ ಗಡ್ಡಿ, ಶಹರ್ ಪೋಲಿಸ್ ಠಾಣೆಯ ಪಿಎಸ್ ಐ ಮಂಜುನಾಥ ಪಾಟೀಲ, ಕ್ರೈಂ ಪಿಎಸ್‌ಐ ಕಿರಸ್ಯಾಳ, ಷಹಜಹಾನ ನಾಯಕ, ಕೆಇಬಿ ಇಲಾಖೆಯ ರವಿ ಮಾದರ, ಪೌರಾಯುಕ್ತ ಶ್ರೀನಿವಾಸ ಜಾಧವ, ಅಗ್ನಿಶಾಮಕ ದಳದ ಅಧಿಕಾರಿ ಪ್ರಕಾಶ ಚಿತ್ತರಗಿ ಉಪಸ್ಥಿತರಿದ್ದು ಗಜಾನನ ಸಮಿತಿಯವರು ಗಣೇಶ ಮೂರ್ತಿ ಪ್ರತಿಷ್ಠಾಪನೇ ಮಾಡಬೇಕಾದರೆ ತೆಗೆದುಕೊಳ್ಳ ಬೇಕಾದ ಅನುಮತಿ ಪತ್ರಗಳನ್ನು ಯಾವ ರೀತಿಯಾಗಿ ಪಡೆದುಕೊಳ್ಳಬೇಕು ಎಂಬುದನ್ನು ವಿವರಿಸಿದರು.

ಸಾರ್ವಜನಿಕ ಗಜಾನನ ಸಮಿತಿಯವರು ಶಾಂತಿ ಸಮಿತಿ ಸದಸ್ಯರು ಸಭೆಯಲ್ಲಿ ಪಾಲ್ಗೊಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

**ವರದಿ ನಬಿ ಹುಣಚಗಿ**

# ಹಿಂದುಳಿದ ವರ್ಗಗಳ ಜನರಿಗೆ ವೈದ್ಯಕೀಯ ಸೇವೆ: ಎಂ.ಆರ್.ಎನ್. ಕಾರ್ಯ ಶ್ಲಾಘನೀಯ

**ರಬಕವಿ–ಬನಹಟ್ಟಿ :** ಮುಧೋಳದ ಎಂ.ಆರ್.ಎನ್. ಫೌಂಡೇಶನ್ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಜನರಿಗೆ ವೈದ್ಯಕೀಯ ಸೇವೆ ಸೇರಿದಂತೆ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಸದಸ್ಯ ಭೀಮಶಿ ಮಗದುಮ್ ತಿಳಿಸಿದರು.

ಅವರು ಗುರುವಾರ ಇಲ್ಲಿನ ಎಸ್. ಟಿ. ಸಿ. ಕಾಲೇಜು ಮತ್ತು ಮುಧೋಳದ ಎಂ.ಆರ್.ಎನ್. ಫೌಂಡೇಶನ್ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು



ಮಾತನಾಡಿದರು. ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ಕ್ಯಾನ್ಸರ್ ತಜ್ಞಡಾ. ಗೋಪಾಲಕೃಷ್ಣ ಮಾತನಾಡಿ,ಇಂದಿನಯುವಕರುತಂಬಾಕು, ಗುಟ್ಕಾ ಸೇವನೆಯಂತಹ ದುಶ್ಚಟದಿಂದ ದೂರವಿರಬೇಕು. ತಂಬಾಕು ಸೇವನೆ ನಮ್ಮ ಜೀವಕ್ಕೆ ಮಾರಕವಾಗಿದೆ. ನಿಯಮಿತವಾಗಿ ಆರೋಗ್ಯತಪಾಸಣೆಯನ್ನುಪ್ರತಿಯೊಬ್ಬರೂ ಕೈಗೊಳ್ಳಬೇಕು ಎಂದರು.

ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್, ಮಂಜುನಾಥಬೆನ್ನೂರ,ಈಶ್ವರನ್ಯಾಮಗೌಡ, ಗೀತಾ ಗೋಂದಕರ ಮಾತನಾಡಿದರು.

ಜನತಾ ಶಿಕ್ಷಣ ಸಂಘದ ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉಪಾಧ್ಯಕ್ಷ ಬಸವರಾಜ ಭದ್ರನ್ನವರ, ಗೌರವ ಕಾರ್ಯದರ್ಶಿ ರಾಜಶೇಖರ ಸೋರಗಾಂವಿ, ಆಡಳಿತ ಮಂಡಳಿಯ ಸದಸ್ಯರಾದ ಎಂ. ಜಿ. ಕೆರೂರ, ಮಲ್ಲಿಕಾರ್ಜನ ಬಾಣಕಾರ, ಶ್ರೀಶೈಲ ಯಾದವಾಡ, ಮಹಾದೇವಿ ಕೊಳಕಿ, ಬಸವರಾಜ ದಲಾಲ,ಡಾ. ರವಿ ಜಮಖಂಡಿ, ಡಾ. ಬಾಲಕೃಷ್ಣ,ಜಿ. ಎಸ್. ಪಾಟೀಲ, ಗಿರೀಶ ಆನಿಖಿಂಡಿ,ಪ್ರಕಾಶ ಕೆಂಗನಾಳ,ಮನೋಹರ ಶಿರಹಟ್ಟಿ,ಗೀತಾ ಸಜ್ಜನ,ರೇಷ್ಮಾ ಗಜಾಕೋಶ ಭಾಗವಹಿಸಿದ್ದರು.

# ಭಕ್ತಿ ಭಾವದಿಂದ ನಡೆದ ಮೌನೇಶ್ವರ ಪಲ್ಲಕ್ಕಿ ಉತ್ಸವ

**ಇಳಕಲ್ :** ಇಲ್ಲಿನ ವಿಶ್ವಕರ್ಮ ಸಮಾಜದ ವತಿಯಿಂದ ಶ್ರಾವಣದ ಕೊನೆಯ ಶುಕ್ರವಾರದಂದು ಮೌನೇಶ್ವರ ಪಲ್ಲಕ್ಕಿ ಉತ್ಸವ ಭಕ್ತಿ ಭಾವದಿಂದ ನಡೆಯಿತು.

ಕಾಳಿಕಾದೇವಿ ದೇವಸ್ಥಾನದಿಂದ ಆರಂಭವಾದ ಪಲ್ಲಕ್ಕಿ ಉತ್ಸವ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದಾಗ ಸಮಾಜದ ಬಾಂಧವರು ತಮ್ಮ ತಮ್ಮ ಮನೆಗಳ ಮುಂದೆ ಪಲ್ಲಕ್ಕಿಗೆ ಪೂಜೆ ಸಲ್ಲಿಸಿದರು.



ಪಲ್ಲಕ್ಕಿ ಉತ್ಸವದ ನೇತೃತ್ವವನ್ನು ಹಿರಿಯರಾದ ವೀರಭದ್ರಪ್ಪ ಹಿಪ್ಪರಗಿ ನಾರಾಯಣಪ್ಪ ಹೂಲಗೇರಿ, ರಾಮಣ್ಣ ಮರೋಳ, ಮನೋಹರ ಕಟಗೂರ, ಜಗದೀಶ ಮರೋಳ, ಗುರು ಪತ್ತಾರ, ಮುತ್ತಣ್ಣಪತ್ತಾರ,ಪ್ರಶಾಂತಪತ್ತಾರ,ಗಂಗಣ್ಣಬಡಿಗೇರ, ನಾರಾಯಣಪ್ಪ ಬಡಿಗೇರ , ಡಾ ನಾಗಲಿಂಗ ಪತ್ತಾರ ಜಗದೀಶ ಹೂಲಗೇರಿ ಮತ್ತಿತರರು ವಹಿಸಿದ್ದರು.

**ವರದಿ ನಬಿ ಹುಣಚಗಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State